ಅನುಭವಮಂಟಪ ಶರಣಚರಿತಾಮೃತ ಮಾಲಿಕೆ-೨೯ (೨೦೨೦)

ಇಷ್ಟಲಿಂಗನಿಷ್ಠ

ಅಮುಗಿದೇವಯ್ಯ



ಜಯಶ್ರೀ ಸುಕಾಲೆ

ಅನುಭವ ಮಂಟಪ ಶರಣ ಚರಿತಾಮೃತ ಮಾಲಿಕೆ-೨೯

ಇಷ್ಟಲಿಂಗನಿಷ್ಠ ಅಮುಗಿದೇವಯ್ಯ

ಶ್ರೀಮತಿ ಜಯಶ್ರೀ ಸುಕಾಲೆ

ಪ್ರಕಾಶಕರು

ಪ್ರಸಾರಾಂಗ, ಲಿಂಗಾಯತ ವಿಶ್ವವಿದ್ಯಾಲಯ

ಅನುಭವ ಮಂಟಪ-ಬಸವಕಲ್ಯಾಣ, ಜಿಲ್ಲೆ-ಬೀದರ.

ISHTALINGANISHTHA AMUGI DEVAYYA

Written by	:	Smt. Jayashree Sukale Basava Prakash Nilaya Road No. 1 Sharana nagara K.E.B. Road, Bidar
Publisher	:	Prasaranga Lingayat University Anubhava Mantapa Basava Kalyan Dist.Bidar
First Edition	:	2020
©	:	Writer
Copies	:	1000
Pages	:	vi + 42 = 48
Price	:	Rs.20 /-
Book size	:	Crown 1/8
Paper Used	:	70 GSM N.S.Maplitho
D.T.P.	:	Mallikarjun gadgi Kallur Printed

ಇಷ್ಟಲಿಂಗನಿಷ್ಠ ಅಮುಗಿದೇವಯ್ಯ

ಲೇಖಕರು	:	ಶ್ರೀಮತಿ ಜಯಶ್ರೀ ಸುಕಾಲೆ ಬಸವ ಪ್ರಕಾಶ ನಿಲಯ ರೋಡ್ ನಂ. ೧ ಶರಣನಗರ ಕೆ.ಇ.ಬಿ. ರಸ್ತೆ, ಬೀದರ್
ಪ್ರಕಾಶಕರು	:	ಪ್ರಸಾರಾಂಗ, ಲಿಂಗಾಯತ ವಿಶ್ವವಿದ್ಯಾಲಯ ಅನುಭವ ಮಂಟಪ–ಬಸವಕಲ್ಯಾಣ, ಜಿಲ್ಲೆ–ಬೀದರ.
ಮೊದಲ ಮುದ್ರಣ	:	೨೦೨೦
ಹಕ್ಕುಗಳು	:	ಲೇಖಕರು
ಪ್ರತಿಗಳು	:	೧೦೦೦
ಪುಟಗಳು	:	vi + ೪೨ = ೪೮
ಬೆಲೆ	:	ರೂ. ೨೦/–
ಪುಸ್ತಕದ ಆಕಾರ	:	
ಬಳಸಿದ ಕಾಗದ	:	೭೦ ಜಿಎಸ್ಎಮ್ ಎನ್.ಎಸ್.ಬುಕ್‌ಪ್ರಿಂಟ್
ಮುದ್ರಕರು	:	ತ್ವರಿತ ಮುದ್ರಣಾಲಯ ಗದಗ

ಪ್ರಕಾಶಕರ ನುಡಿ

೧೨ನೆಯ ಶತಮಾನದ ಅನುಭವ ಮಂಟಪ, ಅದರ ಕರ್ತೃ ಬಸವಣ್ಣನವರು. ನೂತನ ಅನುಭವ ಮಂಟಪದ ರೂವಾರಿಗಳು ಭಾಲ್ಕಿ ಹಿರೇಮಠದ ಡಾ.ಚನ್ನಬಸವ ಪಟ್ಟದ್ದೇವರು. ಬಸವಾದಿ ಶರಣರ ಮಣಿಹ ಹೊತ್ತ ಪೂಜ್ಯರು, ಜನಪರ, ಜೀವಪರ ಕಾಳಜಿಗಳೊಂದಿಗೆ ವೈಚಾರಿಕ ನೆಲೆಯಲ್ಲಿ ಸಾಂಸ್ಕೃತಿಕ ಕೆಲಸ ಕಾರ್ಯಗಳನ್ನು ಜೊತೆಯಲ್ಲಿಯೇ ಪೂರೈಸುತ್ತಿದ್ದರು. ಅದರ ಭಾಗವಾಗಿಯೇ ಕಲೆ, ಸಮಾಜ, ಸಂಸ್ಕೃತಿ ಮತ್ತು ಸಾಹಿತ್ಯದ ಅಧ್ಯಯನ ಪ್ರಸಾರ ಪ್ರಕಟಣೆಗಳು ಈಗಲೂ ಜರುಗುತ್ತವೆ.

೨೦೧೪ರ ಬಸವ ಜಯಂತಿ ಸಂದರ್ಭದಲ್ಲಿ ವಿಶ್ವಬಸವಧರ್ಮ ಟ್ರಸ್ಟ್ ಅನುಭವ ಮಂಟಪ ಬಸವಕಲ್ಯಾಣದ ಅಧ್ಯಕ್ಷರಾಗಿ ಪೂಜ್ಯ ಡಾ.ಬಸವಲಿಂಗ ಪಟ್ಟದ್ದೇವರು ಅಧಿಕಾರ ವಹಿಸಿಕೊಂಡರು. ಅನುಭವ ಮಂಟಪದಲ್ಲಿ ನಿತ್ಯ ಜ್ಞಾನದಾಸೋಹ ವ್ಯವಸ್ಥಿತವಾಗಿ ನಡೆಯಬೇಕೆಂಬ ಉದ್ದೇಶದಿಂದ ಆ ಕಾರ್ಯ ಆರಂಭಿಸಿದರು. ಜೊತೆಗೆ ಸಾಹಿತ್ಯ ಕೃತಿಗಳನ್ನು ಪ್ರಕಟಿಸಲು ಪ್ರಕಾಶನ ಸಂಸ್ಥೆಯನ್ನು ತೆರೆಯಲು ಯೋಜನೆ ರೂಪಿಸಿದರು. ಇದಕ್ಕೆ ಮುಖ್ಯ ಕಾರಣವೆಂದರೆ, ಆಧುನಿಕತೆಯ ಭರಾಟೆಯಲ್ಲಿ "ಪುಸ್ತಕ ಸಂಸ್ಕೃತಿ" ಮಾಯವಾಗುತ್ತಿದೆ. ಅದನ್ನು ಉಳಿಸಿಕೊಳ್ಳಬೇಕೆಂಬ ಬಲವಾದ ಆಶಯ ಅವರದು. ಪುಸ್ತಕ ಪ್ರೇಮಿಗಳೆಲ್ಲರ ಆಶಯವು ಇದೆ ಆಗಿದೆ. ಪುಸ್ತಕವೆಂದರೆ ಕೇವಲ ಹಾಳೆಗಳ ಕಟ್ಟಲ್ಲ. ನಮ್ಮ ಸಾಂಸ್ಕೃತಿಕ ಲೋಕವನ್ನು ಬೆಸೆಯುವ, ನಮ್ಮ ಜ್ಞಾನದ ಪರಿಧಿಯನ್ನು ವಿಸ್ತರಿಸುವ ವಾಹಕ ಅದಾಗಿದೆ. ಮೂಲ ಲೇಖಕನೊಂದಿಗೆ ನಡೆಸುವ ಸಂವಾದವೂ ಅದು ಆಗಿರುತ್ತದೆ. ಜೊತೆಗೆ ಸಮಕಾಲೀನ ಬದುಕಿನ ಅನೇಕ ಆಯಾಮಗಳನ್ನು ಕಟ್ಟಿಕೊಡುವ ಸರಕಾಗಿರುತ್ತದೆ. ಶ್ರೀಗಳ ಆಶಯದಂತೆ ಶರಣರ ಶುದ್ಧ ಚಾರಿತ್ರಿಕ ಜೀವನ ಜನಸಾಮಾನ್ಯರಿಗೂ ತಿಳಿಯಬೇಕೆಂಬ ಹೆಬ್ಬಯಕೆಯಿಂದ ೨೦೧೬ರಲ್ಲಿ 'ಅನುಭವ ಮಂಟಪ ಶರಣ ಚರಿತಾಮೃತ ಮಾಲಿಕೆ'ಯನ್ನು ರೂಪಿಸಿಕೊಂಡು,

ಅದರ ಹೆಸರಿನಲ್ಲಿ ೬೪ ಪುಟದ ವ್ಯಾಪ್ತಿಯ ಶರಣ ಸಾಹಿತ್ಯ ಕುರಿತಾದ ಮೌಲಿಕ ಕೃತಿಗಳನ್ನು ಹೊರತರುವ ಇಚ್ಛೆ ಹೊಂದಲಾಗಿದೆ.

ಈಗಾಗಲೇ ಇದರಡಿಯಲ್ಲಿ ೩೧ ಶರಣರ ಚರಿತ್ರೆಗಳನ್ನು ಹೊರತರಲಾಗಿದ್ದು, ಈಗ ಉರಿಲಿಂಗಪೆದ್ದಿಗಳ ಪುಣ್ಯಸ್ತ್ರೀ ಕಾಳವ್ವೆ , ಜೇಡರ ದಾಸಿಮಯ್ಯ , ಇಷ್ಟಲಿಂಗನಿಷ್ಠ ಅಮುಗಿದೇವಯ್ಯ ಎಂಬ ಕೃತಿಗಳನ್ನು ಈ ಹಂತದಲ್ಲಿ ಲೋಕಾರ್ಪಣೆ ಮಾಡಲು ಸಂತೋಷವೆನಿಸುತ್ತದೆ. ಈ ಪುಸ್ತಕಗಳನ್ನು ಬರೆದ ಲೇಖಕರಿಗೆ ಅನಂತ ಶರಣಾರ್ಥಿಗಳು.

–ಪ್ರಕಾಶಕರು

ಪರಿವಿಡಿ

ಶರಣರ ಜೀವನ

ಹನ್ನೆರಡನೆಯ ಶತಮಾನದಲ್ಲಿ ಬಸವಣ್ಣವನವರು ಕಟ್ಟಿದ ಅನುಭವ ಮಂಟಪ ಎಂಬ ಮಹಾಮನೆಗೆ ನಾನಾ ಕಡೆಗಳಿಂದ ಬಂದ ಶರಣರು ವಿವಿಧ ಕಾಯಕಗಳಲ್ಲಿ ಮನಃಪೂರ್ವಕವಾಗಿ ತೊಡಗಿಸಿಕೊಂಡಿದ್ದರು. ಅಂದಿನ ಹದಗೆಟ್ಟ ಸಾಮಾಜಿಕ ವ್ಯವಸ್ಥೆಯಲ್ಲಿ ಉಚ್ಚಕುಲದವರು ಕೆಳವರ್ಗದವರನ್ನು ಶೋಷಣೆ ಮಾಡುತ್ತಿದ್ದರು. ಕೆಳವರ್ಗದವರಿಗೆ ಅಸ್ತಿತ್ವವೇ ಇರಲಿಲ್ಲ. ಅವರು ದನಿಯಿದ್ದು ಮೂಕರಾಗಿ, ಜೀವವಿದ್ದು ಶವವಾಗಿ ಬದುಕು ಸಾಗಿಸುತ್ತಿದ್ದರು. ಸಮಾಜದ ಈ ವಿಷಮ ಪರಿಸ್ಥಿತಿಯನ್ನು ತೊಡೆದು ಸರ್ವಸಮಾನತೆಯನ್ನು ಸಾಧಿಸಲು ಬಸವಣ್ಣನವರ ಮುಖಂಡತ್ವದಲ್ಲಿ ಮನುಕುಲೋದ್ಧಾರದ ಸಮಾಜೋಧಾರ್ಮಿಕ ಆಂದೋಲನ ನಡೆಯಿತು. ಬಡವ-ಬಲ್ಲಿದರೆಂಬ ವರ್ಗಭೇದ, ಹೆಣ್ಣು-ಗಂಡೆಂಬ ಲಿಂಗಭೇದ, ಉಚ್ಚ-ನೀಚ ಎಂಬ ಜಾತಿಭೇದಗಳಿಂದ ಹರಿದುಹಂಚಿ ಹೋಗಿದ್ದ ಸಮುದಾಯಕ್ಕೆ ಬಸವಾದಿ ಶರಣರು ದನಿ ಕೊಟ್ಟರು. ಕೀಳರಿಮೆಯನ್ನು ಅಳಿಸಿ ಆತ್ಮಗೌರವದಿಂದ ಬದುಕಲು ಕಲಿಸಿದರು.

ಬಸವಣ್ಣನವರು ಕಲ್ಯಾಣವನ್ನು ಕೈಲಾಸವಾಗಿಸಿದರು. ಕಲ್ಯಾಣನಾಡಿನ ಅಂತರಂಗದಲ್ಲಿ ಶರಣರು ಆತ್ಮೋನ್ನತಿಯ ಪರಿಪೂರ್ಣ ವ್ಯಕ್ತಿತ್ವವನ್ನು ಸಾಧಿಸಿದರು. ಉದಾತ್ತ ಮೌಲ್ಯಗಳನ್ನು ಅಳವಡಿಸಿಕೊಂಡು ಲೌಕಿಕ ಪ್ರಲೋಭನೆಗಳನ್ನು ದೂರವಿಟ್ಟರು. ಆತ್ಮ ಪರಮಾತ್ಮನನ್ನು ಸಮೀಕರಿಸಿ ಕಾಯಕ, ದಾಸೋಹ, ಸಮಾನತೆಯಂಥ ಹಲವಾರು ವೈಚಾರಿಕ ಚಿಂತನೆಗಳಿಂದ ಕೂಡಿದ ಸಿದ್ಧಾಂತವನ್ನು ವಚನ ಮಾಧ್ಯಮದ ಮೂಲಕ ಪ್ರಸಾರ ಮಾಡಿದರು. ಶರಣರು ನಡೆದರೆ ನುಡಿದರೆ ನಿಂದರೆ ನೆಲೆಸಿದರೆ

ನೆಲದ ಹೃದಯದಲ್ಲಿ, ಗಾಳಿಯ ಎದೆಯಲ್ಲಿ, ನೀರಿನ ತಂಪಿನಲ್ಲಿ ಪಾವನ ಪವಿತ್ರ ಪುಣ್ಯತೀರ್ಥಗಳು ಅವಿಮುಕ್ತ ಕ್ಷೇತ್ರಗಳು ಉದ್ಭವವಾದವು. ಭಕ್ತರ ಅಂಗಳವೇ ವಾರಣಾಸಿಯಾಯಿತು.

ಶರಣರು ಧಾರ್ಮಿಕ ಕ್ರಾಂತಿಯಿಂದ ಜನಜೀವನಕ್ಕೆ ಹೊಸ ತಿರುವು ನೀಡಿದರು. ಮಾನವನ ಬದುಕಿನಲ್ಲಿ ಸಮಗ್ರ ಕ್ರಾಂತಿಗೈದು ಸಮಾಜ ಪರಿವರ್ತನೆ ಮಾಡಿದರು. ವ್ಯಷ್ಟಿ ಪ್ರಜ್ಞೆಯಲ್ಲಿದ್ದ ಧರ್ಮವನ್ನು ಸಮಷ್ಟಿ ಪ್ರಜ್ಞೆಯತ್ತ ಮುನ್ನಡೆಸಿದರು. ಸಮಾಜದಲ್ಲಿದ್ದ ಭೇದಭಾವದ ಅನಿಷ್ಟ ಪದ್ಧತಿಯನ್ನು ಕಿತ್ತೊಗೆದು ಸಮತೆಯ ಸಾಧಿಸಿ ಧರ್ಮಕ್ಕೆ ಪುರ್ನಜನ್ಮ ನೀಡಿದರು. ಬಸವಣ್ಣನವರು ಅನುಭವ ಮಂಟಪವನ್ನು ಕಟ್ಟಿ ಅಶಿಕ್ಷಿತರನ್ನು ಸುಸಂಸ್ಕೃತರನ್ನಾಗಿಸಿದರು. ಶಿಸ್ತುಬದ್ಧ ಸಮಾಜ ನಿರ್ಮಿಸಲು ತತ್ತ್ವ ಸಿದ್ಧಾಂತದ ತಳಹದಿಯ ಕಲ್ಪನೆಯನ್ನು ನೀಡಿದರು. ಜನಮಾನಸದಲ್ಲಿಯ ಪ್ರಾಚೀನ ಕುರುಡು ನಂಬಿಕೆಗಳನ್ನು ತೊಡೆದು ನೈಜ ಸಿದ್ಧಾಂತ ಪ್ರತಿಪಾದಿಸಿದರು. ನಡೆ–ನುಡಿ ಒಂದಾಗಿಸಿಕೊಂಡು ಬಾಳಿದರು. ತಮ್ಮ ಬದುಕಿನ ಅನುಭವದಿಂದ ವಚನಗಳನ್ನು ರಚಿಸಿ ಆಚರಿಸಿ ತೋರಿಸಿದರು. ಅಂತೆಯೆ ಶರಣರ ಚಳವಳಿ ಜನರ ಮನಸ್ಸಿನ ಮೇಲೆ ಗಾಢವಾದ ಪರಿಣಾಮ ಬೀರಿತು. ಶರಣರು ಜಡಧರ್ಮ ಸಿದ್ಧಾಂತಕ್ಕಿಂತ, ಕಾಯಕಸಿದ್ಧಾಂತಕ್ಕೆ ಮತ್ತು ಅದರ ಆಚರಣೆಗೆ ಪ್ರಾಶಸ್ಯ ನೀಡಿದರು. ಅಂಥವರಲ್ಲಿ ಏಕಲಿಂಗ ನಿಷ್ಠೆಯ ಶರಣ ಅಮುಗಿದೇವಯ್ಯನವರು ಒಬ್ಬರಾಗಿದ್ದರು.

■■

ಸೊಲ್ಲಾಪುರದಲ್ಲಿ ಅಮುಗಯ್ಯ

ಕಲ್ಯಾಣ ನಾಡಿಗೆ ಧಾವಿಸಿ ಬಂದ ಅನೇಕ ಶರಣರಲ್ಲಿ ನೇಕಾರಿಕೆ ವೃತ್ತಿ ಕೈಕೊಂಡವರು ಇಬ್ಬರೆಂದು ತಿಳಿದುಬರುತ್ತದೆ. ಆದ್ಯ ವಚನಕಾರರಾದ ಜೇಡರ ದಾಸಿಮಯ್ಯ ಮತ್ತು ಅಮುಗಿದೇವಯ್ಯ, ಜನಪದ ಕವಿಗಳು ನೇಗಿಯ ಅಮುಗಯ್ಯ ಎಂದು ಅವರ ಬದುಕಿನ ಅನೇಕ ಸಂಗತಿಗಳನ್ನು ಮರೆಯದೆ ಹಾಡುತ್ತಾ ಬಂದಿದ್ದಾರೆ. ಅಮುಗಯ್ಯ ಜನಪದರು ಮೆಚ್ಚಿದ

ಶರಣನಾಗಿ ಇದ್ದುದರಿಂದ ಅದೇ ಪರಂಪರೆಯಾಗಿ ಬಂದಿದೆ. ಅಮುಗಯ್ಯನ ಹಿರಿಮೆಯನ್ನು ತಲೆದೂಗುವಂತೆ ಜನಪದ ಕವಿಯು ಹಂತಿಯ ಹಾಡುಗಳಲ್ಲಿಯೂ ಹಾಗೂ ಜನಪದರ ನುಡಿಗಳಲ್ಲಿ ಅನೇಕ ಐತಿಹಾಸಿಕ ಸಂಗತಿಗಳು ಅಡಕವಾಗಿರುವುದು ಎದ್ದು ಕಾಣುತ್ತದೆ. ಇವೆಲ್ಲವುಗಳನ್ನು ಡಾ. ಬಿ. ಎಸ್. ಗದ್ದಗಿಮಠ ಅವರ 'ಕನ್ನಡ ಜನಪದ ಗೀತೆಗಳು' ಎಂಬ ತಮ್ಮ ಸಂಶೋಧನಾ ಕೃತಿಯಲ್ಲಿ ಉಲ್ಲೇಖಿಸಿದ್ದಾರೆ.

ಕುರುಸೆಟ್ಟಿ ಲಿಂಗಿಗಳು ಹರಮತದ ಸೇವಕರು
ನೆರುವಾಗಿ ನೇಗಿ ಕಾಯಕವು । ಸೊನ್ನಲಗಿ
ಶರಣ ಅಮುಗಯ್ಯ ಹುಟ್ಟಿದ್ದು

ಅಮುಗಿದೇವಯ್ಯನವರು ಮೂಲತಃ ಸೊಲ್ಲಾಪುರದ (ಸೊನ್ನಲಿಗೆ) ನಿವಾಸಿಯಾಗಿದ್ದರು. – ಅಲ್ಲಿಯೆ ನೆಯ್ಗೆಯ ಕಾಯಕ ಮಾಡಿಕೊಂಡು ಇಷ್ಟಲಿಂಗಪೂಜೆ ಮತ್ತು ಜಂಗಮ ದಾಸೋಹದಲ್ಲಿ ನಿರತರಾದ ಶಿವಭಕ್ತ ಅಮುಗಯ್ಯ ಅಖಂಡವಾದ ಕಾಯಕನಿಷ್ಠೆ ಮತ್ತು ಲಿಂಗನಿಷ್ಠೆಗಳಿಗೆ ಹೆಸರಾಗಿದ್ದರು.

ಸೊಲ್ಲಾಪುರವು ಶಿವಯೋಗಿ ಸಿದ್ಧರಾಮರ ನೆಲೆ ಮತ್ತು ಕಾರ್ಯಕ್ಷೇತ್ರವಾಗಿತ್ತು. 'ಕೈಲಾಸದಿಂದ ಪರಮಮೇಶ್ವರನ ಶುದ್ಧ ಸಾತ್ವಿಕವೆ ಜಗಹಿತಾರ್ಥವಾಗಿ ಮೃತ್ಯರ್ಕ್ಕವತರಿಸಿದ' ಶಿವನೇ ಸಿದ್ಧರಾಮ ಎಂದು ಜನರೆಲ್ಲರ ಹೃದಯದಲ್ಲಿ ಸಂಪೂರ್ಣವಾಗಿ ಮನೆಮಾಡಿತ್ತು. ಶಿವಯೋಗಿ ಸಿದ್ಧರಾಮಯ್ಯ ಜನರಿಗೆ ಹಿತವಾಗಲೆಂದು ಬಯಸಿ ಗುಡಿ, ಗೋಪುರ, ಕೆರೆ, ಅರವಟ್ಟಿಗೆ, ಆರವೆ (ಉದ್ಯಾನವನ) ಮತ್ತು ಅನ್ನಛತ್ರಗಳನ್ನು ಕಟ್ಟಿಸುವ ಭರದಲ್ಲಿ ಮನಮಗ್ನರಾಗಿದ್ದರು. ಅವರ ಸಾಧನೆಯ ಸುದ್ದಿ ದಶದಿಕ್ಕುಗಳಿಗೂ ಪಸರಿಸಿ ಸರ್ವವಿದ್ಯೆಯನ್ನು ಬಲ್ಲಿದ ಸಿದ್ಧಿಪುರುಷರೆಂದು ಪ್ರಸಿದ್ಧರಾಗಿದ್ದರು.

ಸಿದ್ಧರಾಮರ ನುಡಿಗೆ ಎದುರುತ್ತರಿಸುವ ಧೈರ್ಯ ಯಾರಿಗೂ ಇರಲಿಲ್ಲ. ಅಲ್ಲದೆ ಅವರ ಆಜ್ಞೆಯನ್ನು ಯಾರೂ ಉಲ್ಲಂಘಿಸುವಂತಿರಲಿಲ್ಲ. ಸಿದ್ಧರಾಮ ಮತ್ತು ಅಮುಗಿದೇವಯ್ಯನವರ ಕಥೆ ಹಲಗೆದೇವರು ಸಂಕಲಿಸಿದ

'ಶೂನ್ಯ ಸಂಪಾದನೆ' ಯಲ್ಲಿ ಬರುತ್ತದೆ. ರಾಘವಾಂಕನ ಎಲ್ಲ ಕಾವ್ಯಗಳ ಕಥಾಸಾರವನ್ನು ಸಿದ್ಧನಂಜೇಶ ಪ್ರಾಸಾಂಗಿಕವಾಗಿ ಸಂಗ್ರಹಿಸಿದ್ದಾನೆ. ಅಲ್ಲಿ 'ಸಿದ್ಧರಾಮ ಚಾರಿತ್ರೆ' ಯ ಕಥೆ ಮತ್ತು ಸಿದ್ಧರಾಮರ ಆಜ್ಞೆಯನ್ನು ಅಮುಗಿದೇವಯ್ಯ ಉಲ್ಲಂಘಿಸಿರುವ ಪ್ರಸಂಗವಿದೆ. ದಂತಕಥೆಗಳಲ್ಲಿ ಮತ್ತು ಜನಪದರ ನುಡಿಗಳಲ್ಲಿ ಅಮುಗಯ್ಯ ಅಗಾಧ ಯೋಗಿ ಸಿದ್ಧರಾಮರನ್ನು ಎದುರಿಸಿದ ಎದೆಗಾರಿಕೆಯ ಘಟನೆ ರೋಚಕವಾಗಿದೆ.

ಸೊನ್ನಲಿಗೆಯ ಸಿದ್ಧರಾಮರು ಕಲ್ಯಾಣಕ್ಕೆ ಬರುವ ಪೂರ್ವದಲ್ಲಿ ಸ್ಥಾವರಲಿಂಗ ಪೂಜಕರಾಗಿದ್ದರಿಂದ ಅನೇಕ ಶಿವಲಿಂಗಗಳ ಗುಡಿ ಕಟ್ಟಿಸುವುದು, ಕೆರೆ ಕಟ್ಟಿಸುವುದು ಮುಂತಾದ ನಾನಾ ರೀತಿಯ ಕೆಲಸ ಕಾರ್ಯಗಳಲ್ಲಿ ತೊಡಗಿಸಿಕೊಂಡ ಶಿವಭಕ್ತರಾಗಿದ್ದವರು. "ಗುರುಮಲ್ಲಿಕಾರ್ಜುನಗೆ ವರಸಿದ್ಧರಾಮಯ್ಯ, ಮೆರೆಯಿಸುವ ಹಬ್ಬ ಸಾರಿದನು। ಸೊನ್ನಲಿಗೆ, ಪುರವೆದ್ದು ಬಂತು ಸೌರಿಸಲು" ಎನ್ನುತ್ತಾರೆ ಜನಪದರು.

ಸಿದ್ಧರಾಮರು ಕಪಿಲಸಿದ್ಧಮಲ್ಲಿನಾಥನ ಮಹಾಪರ್ವವನ್ನು ಅತ್ಯಂತ ಸಂಭ್ರಮ ಸಡಗರದಿಂದ ಆಚರಿಸಬೇಕೆಂದು ನಿರ್ಧರಿಸಿದರು. ಆಗ ಪುರದ ಜನರೆಲ್ಲರೂ ಸಿದ್ಧರಾಮರ ಹೇಳಿಕೆಯಂತೆ ಅನುಸರಿಸಿದರು. "ಕುಟ್ಟುವುದು ಬೀಸುವುದು ಬುಟ್ಟಿಯೊಳು ತುಂಬುವದು, ಒಟ್ಟು ಜನಗೂಡಿ ಸೌರಣೆಯ। ನಡೆಸಿರಲು, ಬಟ್ಟಬಯಲಾತು ಹಂದರವು." ದೇವರ ಹಬ್ಬವೆಂದು ಜನರೆಲ್ಲಾ ಒಂದುಗೂಡಿ ಎಲ್ಲಾ ಕಡೆಗಳಿಂದ ರಾಶಿ ರಾಶಿಯಾಗಿ ದವಸ ಧಾನ್ಯಗಳನ್ನು ಸಂಗ್ರಹಿಸಿದರು. ಅವುಗಳನ್ನು ತಂದು ಹಸನು ಮಾಡುವುದು, ಕುಟ್ಟುವುದು, ಬೀಸುವುದು ಹೀಗೆ ಮೊದಲಾದ ಕೆಲಸ ಕಾರ್ಯಗಳನ್ನು ಸೊನ್ನಲಿಗೆಯಲ್ಲಿರುವ ಜನರಿಗೆ ಹಂಚಲಾಯಿತು. ಸರದಿಯಂತೆ ಅಮುಗಿದೇವಯ್ಯನವರ ಮನೆಗೂ ಹತ್ತು ಕೊಳಗ ಭತ್ತ ಕುಟ್ಟಿಕೊಡಬೇಕೆಂದು ಅವರ ಶಿಷ್ಯರು ತಂದು ಸುರುವಿದರು.

> **"ಇಷ್ಟಲಿಂಗದ ಭಕ್ತ ಬಿಟ್ಟುಳಿದ ಮನೆಯೊಳಗೆ**
> **ಕಟ್ಟ ಶಿವಶರಣ ಅಮುಗಯ್ಯ । ಸೇವಕರು**
> **ಕೊಟ್ಟಣಕೆ ಬಿಟ್ಟೆ ಬಾಯೆಂದು"**

ಸಿದ್ಧರಾಮರ ಶಿಷ್ಯರು ಅವರಿವರೆನ್ನದೆ ಎಲ್ಲರ ಮನೆಗೆ ಕೊಟ್ಟಣವನ್ನು ಕುಟ್ಟಲು ಕೊಡುತ್ತಿದ್ದರು. ಇಷ್ಟಲಿಂಗನಿಷ್ಠೆಯ ಅಮುಗಿದೇವಯ್ಯ 'ಇಷ್ಟಲಿಂಗವಿಲ್ಲದ ಭವಿಯ ಸೇವೆ ನಾವು ಮಾಡಲಾರೆವು' ನಿಮ್ಮ ಭತ್ತ ಹಿಂದಕ್ಕೆ ತೆಗೆದುಕೊಂಡು ಹೋಗಿ ಎಂದು ಭತ್ತ ಕುಟ್ಟಿ ಕೊಡುವುದಕ್ಕೆ ನಿರಾಕರಿಸುತ್ತಾರೆ. 'ನಿಮ್ಮ ದೊರೆಗಳ ಬಿಟ್ಟೆ ಅಮ್ಮೆಂದು ಮೂಡುವದೆ, ಹುಮ್ಮನಿಮ್ಮರಸ ಲಿಂಗಿಲ್ಲ। ದಿರುತಿಹನು, ದಿಮ್ಮಿದನು ತಾನು ಜಗಕ್ಕೆಂದ' ಅಮುಗಯ್ಯ ನಾವು ಇಷ್ಟಲಿಂಗದ ಪೂಜಕರು ಆದರೆ ನಿಮ್ಮ ದೊರೆಗಳಿಗೆ ಇಷ್ಟಲಿಂಗವಿಲ್ಲ. 'ಲಿಂಗಿಗಳು ನಾವಿದ್ದು ಸಂಗ ಭವಿಗಳದೇಕೆ, ಲಿಂಗನಿಗೆ ಸೇವೆ ಜಗದೊಳಗೆ। ಶರಣರದು, ಅಂಗ ಸವಿತನಕ ಕಾಯಕವು'. ಹೋಗಿ ನಿಮ್ಮ ದೊರೆಗಳಿಗೆ ಮೊದಲು ಅಂಗದ ಮೇಲೆ ಲಿಂಗ ಧರಿಸಲು ಹೇಳಿ ಎಂದರು.

ಶಿಷ್ಯರು ಈ ಸುದ್ದಿಯನ್ನು ಶೀಘ್ರದಿಂದ ಸಿದ್ಧರಾಮರಿಗೆ ತಲುಪಿಸಿದರು. ಸಮಾಚಾರ ಆಲಿಸಿದ ಸಿದ್ಧರಾಮ ಸಿಟ್ಟಿನಿಂದ ಏನು? ನನಗೆ ಅಮುಗಯ್ಯ ಹೀಗೆಂದನೆ ! ನಾನು ಈಗಾಗಲೇ ಸರ್ವಾಂಗಲಿಂಗಿಯಾಗಿರುವೆ. ನನ್ನ ರೋಮ ರೋಮಗಳೆಲ್ಲವೂ ಲಿಂಗಮಯವಾಗಿವೆ. ಮತ್ತೆ ನನಗೆ ಇಷ್ಟಲಿಂಗ ಧರಿಸೆಂದು ಹೇಳುವ ಆ ದೇವಯ್ಯನಿಗೆ ಎಷ್ಟು ಅಹಂಕಾರವಿದ್ದಿರಬೇಕು! "ಸೇವಕರು ತಿಳಿಸಿದರು ಯಾವದನು ಬಚ್ಚಿಡದೆ, ಕಾವಾಗಿ ರಾಮ ಅಮುಗನಿಗೆ। ಆಣತಿಯ, ಜಾವದೊಳು ಊರ ಬಿಡಲೆಂದು". ಸಿದ್ಧರಾಮ ಗುಡುಗಿದರು.

ಸಿದ್ಧರಾಮರು ಕೋಪದಿಂದ 'ಹುಟ್ಟಲಿಂಗವು ಬೇರೆ, ಕೊಟ್ಟ ಲಿಂಗವು ಬೇರೆ, ಇಷ್ಟಲಿಂಗೆಂದು ಬೇರುಂಟೆ। ಮೈತುಂಬ, ನಟ್ಟಿಹವು ಲಿಂಗ ತನಗೆಂದ'. ಲಿಂಗವೆಂದರೆ ಎಲ್ಲವೂ ಒಂದೇ ಆ ಇಷ್ಟಲಿಂಗ ಎಂಬುದು ಮತ್ತೆ ಬೇರೆ ಇರುತ್ತದೆಯೇ ? ನನ್ನ ಮೈಯ ತುಂಬೆಲ್ಲಾ ಲಿಂಗಗಳಿವೆ. ನಡೆಯಿರಿ ನಾನೇ ಬಂದು ಆ ಅಮುಗಯ್ಯನಿಗೆ ಹೇಳುತ್ತೇನೆ ಎಂದು ನಡೆದರು.

ಅಮುಗಯ್ಯ! ದೇವರ ಪೂಜೆ ಎಂದರೆ ಎಲ್ಲವೂ ಒಂದೆ ಅಲ್ಲವೆ? ಹೇ, 'ದೇವಯ್ಯ ಕಪಿಲಸಿದ್ಧೇಶನ ಸೇವೆ ತಾಂ ಸಲ್ಲದೇ'? ದೇವರ ಕೆಲಸವನ್ನು

ಕೂಡ ನೀನು ನಿರಾಕರಿಸುವೆಯಾ?' ಎಂದಾಗ ಅಮುಗಿದೇವಯ್ಯ "ಕಪಿಲಸಿದ್ಧಮಲ್ಲೇಶ ತಾಂ ಪಿರಿದು ನಿಮಗೈಸೆ, ನಮಗೇನು?" ಎಂದು ಸಮಾಧಾನದಿಂದ ಉತ್ತರಿಸುತ್ತಾರೆ. 'ದೇವಯ್ಯ! ಕೊಟ್ಟಣಕುಟ್ಟಿ ಕೊಡುವಿರೋ ಇಲ್ಲ ಊರು ಬಿಡುವಿರೋ? ಯಾರು ಕಪಿಲಸಿದ್ಧಮಲ್ಲೇಶನ ಸೇವೆ ನಿರಾಕರಿಸುವರೋ ಅವರು ಸೊನ್ನಲಿಗೆಯಲಿ ಇರಕೂಡದು' ಎಂದು ಸಿದ್ಧರಾಮ ಆಜ್ಞಾಪಿಸುತ್ತಾರೆ.

ಅಮುಗಿದೇವಯ್ಯನವರ ಕಥೆಯು ಹಲವು ಗ್ರಂಥಗಳ ವಿಭಾಗಗಳಿಂದ ಪ್ರಾರಂಭವಾಗುವುದು. ೧೪೬೫ ರಲ್ಲಿ ಇರುವ ಹಲಗೆಯದೇವರು ಸಂಕಲಿಸಿದ 'ಶೂನ್ಯ ಸಂಪಾದನೆ'ಯಲ್ಲಿ, ೧೬೫೦ ರಲ್ಲಿ ಸಿದ್ಧನಂಜೇಶ ರಾಘವಾಂಕನ 'ಸಿದ್ಧರಾಮ ಚಾರಿತ್ರ' ಕೃತಿಯಿಂದ ಸಂಗ್ರಹಿಸಿರುವುದು. ಇನ್ನೂ 'ಅಮುಗಿದೇವಯ್ಯಗಳ ರಗಳೆ' ಎಂಬುದು ೧೬೨೦ ರಲ್ಲಿ ಶಂಕರದೇವ, ಇನ್ನೊಂದು ಸ್ವತಂತ್ರ ಕೃತಿ, 'ಅಮುಗಿದೇವಯ್ಯಗಳ ಸಾಂಗತ್ಯ' ೧೭ನೆಯ ಶತಮಾನದ ಶಿವಲಿಂಗ ಕವಿ, ಹೀಗೆ ಮೊದಲಾದವರು ಅಮುಗಿದೇವಯ್ಯನವರ ಬಗ್ಗೆ ರಚಿಸಿದ್ದಾರೆ.

ಕೆಲವು ವಿವರಗಳಲ್ಲಿ ಹಿಂದಿನ ಹಲವಾರು ಕಥೆಗಳಿಗಿಂತ ಶಿವಲಿಂಗಕವಿಯ ನಿರೂಪಣೆ ಭಿನ್ನವಾಗಿದೆ. ಅಮುಗಿದೇವಯ್ಯನವರ ಪತ್ನಿಯ ಹೆಸರನ್ನು ಕುರಿತು ಸ್ವಲ್ಪ ಗೊಂದಲಗಳಿವೆ. ಅಮುಗಿದೇವಯ್ಯನವರ ಪತ್ನಿಯ ಹೆಸರು 'ರುದ್ರಾಣಿ' ಎಂದು ಶಿವಲಿಂಗಕವಿ ಹೇಳುತ್ತಾನೆ; ಶಂಕರದೇವ ಕವಿ ಕೊಟ್ಟಿರುವ ಹೆಸರು 'ವರದಾನಿ' ಎಂದಾಗಿದೆ. ಡಾ. ಫ. ಗು. ಹಳಕಟ್ಟಿಯವರು ಅಮುಗಿದೇವನಿಗೆ ರಾಯಮ್ಮ ಎಂಬ ಹೆಂಡತಿ ಇದ್ದು ಆಕೆಯು ವಚನಗಳನ್ನು ರಚಿಸಿದ್ದಾಳೆ ಎಂಬುದು ವಚನಗಳಿಂದ ಗೊತ್ತಾಗುತ್ತದೆ ಎಂದು ಅವಳ ನಾಲ್ಕು ವಚನಗಳ ಉದಾಹರಣೆಯ ಮೂಲಕ ತಿಳಿಸಿದ್ದಾರೆ.

ಸಿದ್ಧರಾಮರ ನುಡಿಯ ಕೇಳಿದ ಅಮುಗಯ್ಯ, ಪತ್ನಿಯನ್ನು ಕುರಿತು ನಮಗೆ ಈ ಊರಿನಲ್ಲಿ ಇರುವ ಭವಿಗಳ ಗಾಳಿ ಸರಿಹೋಗಲ್ಲ. ಅದಕ್ಕಾಗಿ ನಾವಿನ್ನು ಈ ಊರಲ್ಲಿ ಇರುವುದು ಬೇಡ ಎಂದರು.

ವರದಾನಿ ಹೆಂಡತಿಯೆ ತರವಲ್ಲ ಈ ಊರು
ಮರುದಿನವೆ ನಡೆದು ಕಲ್ಯಾಣ । ಸೇರೋಣ
ತರವಲ್ಲ ಭವಿಯ ಗಾಳೆಂದು

"ನಿಮ್ಮ ಪುರವೆಮಗೆ ಸಲ್ಲದು" ಎಂದು ದಂಪತಿ ಅಂಜದೆ ಅಳುಕದೆ ಕತ್ತಲಾಗುವುದರೊಳಗೆ ಊರು ಬಿಡಬೇಕೆಂದು ನಿರ್ಧರಿಸಿದರು. "ಹೊತ್ತು ಮುಣುಗುವ ಮುನ್ನ ಕಿತ್ತು ಕಟ್ಟಿದ ಕಂಬಿ, ಎತ್ತಿಡದ ಹೊರೆಯು ಮೂರಾಗೆ। ಗಟ್ಟೆಂದ, ಕತ್ತಲಕೆ ಊರ ಬಿಡುವುದಕೆ". ಎಂದು ಜನಪದ ಕವಿ ಈ ಪ್ರಸಂಗವನ್ನು ಪ್ರಸ್ತಾಪಿಸಿದ್ದಾನೆ. ಅಮುಗಿದೇವಯ್ಯ ತಮ್ಮ ಸಾಮಾನುಳನ್ನೆಲ್ಲಾ ಮೂರು ಗಂಟುಗಳನ್ನಾಗಿ ಮಾಡಿದರು. ದಂಪತಿಗಳು ತಲಾ ಒಂದೊಂದು ಗಂಟು ಹೊತ್ತುಕೊಂಡು ಕಲ್ಯಾಣದೆಡೆಗೆ ಹೊರಟು ನಿಂತರು.

ಆಗ ರಾಯಮ್ಮನಿಗೆ ನಾವಿರೋದು ಇಬ್ಬರು ಆದರೆ ಇಲ್ಲಿ ಮೂರು ಗಂಟುಗಳಾಗಿವೆ ಎಂಬ ಚಿಂತೆಯಾಯಿತು. ಪತಿ ದೇವಯ್ಯನವರಿಗೆ ರಾಯಮ್ಮ ಉಳಿದ ಇನ್ನೊಂದು ಹೊರೆಯನ್ನು ಯಾರು ಹೊತ್ತು ತರುತ್ತಾರೆ ಎಂದು ಕೇಳಿದಳು. "ಮೂರನೆಯ ಹೊರೆಯನ್ನು ಯಾರು ಹೊತ್ತರಬೇಕು, ನಾರಿ ದಾನವ್ವ ಕೇಳಿದಳು । ಅಮುಗಯ್ಯ, ಬೇರಿಟ್ಟ ಹೊರೆಯ ಚಿಂತ್ಯಾಕೆ". ರಾಯಮ್ಮನವರ ಪ್ರಶ್ನೆಗೆ ಅಮುಗಯ್ಯನವರು ಮೂರನೆಯ ಗಂಟಿನ ಚಿಂತೆ ನಾವ್ಯಾಕೆ ಮಾಡಬೇಕು.

ನಿನ್ನ ಹೊರೆ ನೀ ಹೊತ್ತಿ ನನ್ನ ಹೊರೆ ನಾ ಹೊತ್ತೆ
ಇನ್ನುಳಿದ ಹೊರೆಯು ಶಿವಗೆಡೆಯು । ಶಿವಭಕ್ತಿ
ಕಣ್ಣು ಹೊಸಮತದ ಕಾಯಕಕೆ"

ನಿನ್ನ ಪಾಲಿನ ಹೊರೆಯನ್ನು ನೀನು ಹೊತ್ತಿರುವಿ, ನನ್ನ ಪಾಲಿನ ಹೊರೆಯು ನಾನು ಹೊತ್ತಿರುವೆ, ಮೂರನೆಯದರ ಚಿಂತೆ ಬಿಟ್ಟು ಮುಂದೆ ನಡೆಯೋಣ, ಉಳಿದ್ದದ್ದು ಆ ಶಿವನಿಗೆ ಬಿಟ್ಟದ್ದು, ನಮ್ಮ ಕಾಯಕ ನಮಗೆ ನಡೆ ಹೋರಡೋಣ. ಎಂದು ಇನ್ನೂಳಿದ ಒಂದು ಗಂಟು ಅಲ್ಲಿಯೇ ಬಿಟ್ಟು ನಡೆದರು. ಭಕ್ತರ ಬಂಧುವೆಂದು ಹೊಗಳಿಸಿಕೊಳ್ಳುವ ಆ ಶಿವನೇ ಹೊತ್ತು ತರುವನು, ಬೇಡವಾದರೆ ಬಿಡುವನು ಅದರ ಚಿಂತೆಬೇಡ, ಎಂದವರೇ

ಗಂಟು ಹೊತ್ತುಕೊಂಡು ಪತ್ನಿಯ ಜೊತೆಗೆ ಕಾಲ್ನಡಿಗೆಯಲ್ಲಿ ಸರಸರನೆ ಕಲ್ಯಾಣದ ಕಡೆಗೆ ಹೊರಟರು.

"ಮಿಕ್ಕುಳಿದುದೀ ಹೊರೆಯ ಮುಕ್ಕಣ್ಣ ಹೊತ್ತರುವ
ತೆಕ್ಕೆಯೊಳು ಯೆತ್ತಿ ಆಡಿಸುವ । ಶಿವಭಕ್ತಿ
ತುಕ್ಕು ಹಿಡಿಯುವದೆ ಜಗದೊಳಗೆ"

ಅಮುಗಿದೇವಯ್ಯನವರ ಶಿವಭಕ್ತಿಗೆ ಮೆಚ್ಚಿದ ಶಿವನು, ಅವರು ಬಿಟ್ಟು ಹೋದ ಹೊರೆಯನ್ನು ಹೊತ್ತುಕೊಂಡು ಶಿವಪುರಕ್ಕೆ ತಲುಪಿಸುತ್ತಾನೆ.

ದಂಪತಿಗಳು ಕಲ್ಯಾಣದ ಹತ್ತಿರವಿರುವ ಶಿವಪುರವನ್ನು ತಲುಪಿದಾಗ ತಾವು ಊರಲ್ಲಿಯೇ ಬಿಟ್ಟು ಬಂದ ಮೂರನೆಯ ಗಂಟು ಅವರಿಗಿಂತ ಮೊದಲೇ ಶಿವಪುರ ತಲುಪಿರುವುದನ್ನು ಕಂಡು ಆಶ್ಚರ್ಯಚಕಿತರಾದರು. ಗಂಡ-ಹೆಂಡಿರು ಕೂಡಿಕಂಡು ಶಿವಪುರ ಸೇರಿ, ಕಂಡು ಮೂರನೆಯ ಹೊರೆಯನ್ನು। ಶಿವಶರಣ, ಕೆಂಡಗಣ್ಣನದೆ ಆಟೆಂದು. ಓಹೋ ಮುಕ್ಕಣ್ಣನಾದ ಸದಾಶಿವನ ಇಚ್ಛೆ ನಾವು ಶಿವಪುರದಲ್ಲಿಯೇ ಇರಬೇಕು ಎಂದು ಇದೆ. ಅದಕ್ಕಾಗಿಯೆ ಈ ಗಂಟನ್ನು ಇಲ್ಲಿ ಇಟ್ಟಿರುವರು. ಸರಿ ಶಿವನಿಚ್ಛೆಯಂತೆ ಆಗಲಿ ಎಂದು ಅಲ್ಲಿಯೆ ನೆಲೆಸಿದರು.

ಶಿವಪುರಕೆ ಬೀಡಾದ ಶಿವಶರಣ ಅಮುಗಯ್ಯ
ಶಿವನೆಂದು ಮಾಡಿ ಹೊರೆಯಿಳಿಸಿ । ಕಾಯಕವು
ದವನಾಯ್ತು ಶಿವಗೆ ದಾಸೋಹ

ಅಮುಗಿದೇವಯ್ಯ ದಂಪತಿ ಶಿವಪುರದಲ್ಲಿಯೇ ಉಳಿದುಕೊಂಡು ತಮ್ಮ ನೆಯ್ಗೆಯ ಕಾಯಕ ಮತ್ತು ದಾಸೋಹದಲ್ಲಿ ನಿರತರಾಗುತ್ತಾರೆ.

ಸತಿ ಪತಿಯರು ಸೋಲಾಪುರವನ್ನು ಬಿಟ್ಟು ಹೊರಟ ಮೂರನೆಯ ದಿನವೆ ಸಿದ್ಧರಾಮ ಹಮ್ಮಿಕೊಂಡ ಮಹಾಪರ್ವವು ಪ್ರಾರಂಭವಾಯಿತು. ಮೊದಲಿಗೆ ಕಪಿಲಸಿದ್ಧಮಲ್ಲಿಕಾಜುನನ ಮೂರ್ತಿಗೆ ಎಣ್ಣೆಮಜ್ಜನ ಮಾಡುವಾಗ ಮೂರ್ತಿಯೊಳಗಿಂದ ಶಬ್ದ ಬರುತ್ತದೆ. 'ಹೋ ಹೋ ಸಿದ್ಧರಾಮ ಮುಟ್ಟದಿರು ತಲೆಬುಗುಟು ನೋಯುತ್ತಿದೆ' ಎಂಬ ಧ್ವನಿ ಕೇಳಿಸಿತು.

"ಮುಟ್ಟಬೇಡಲೆ ರಾಮ ಬಿಟ್ಟಿ ಹೊತ್ತಿದ ನೆತ್ತಿ
ಜುಟ್ಟು ಸಹಿತನಗೆ ನೋಯುತ್ತಿದೆ । ನಿನ
ಪಾಪ ಸಿಟ್ಟಾಗಬೇಡ ದಿಟ ಮಾತು"

ಆ ಶಬ್ದ ಕೇಳಿದ ಸಿದ್ಧರಾಮ ಬೆರಗಾಗಿ "ದೇವ ! ನಿಮ್ಮ ಶಿರ ನೊಂದ ಪರಿಯೆಂತುಂಟು?" ಎಂದು ಕೇಳಿದರು. ಮತ್ತೆ ಮೂರ್ತಿಯೊಳಗಿನ ಶಬ್ದ ಬರುತ್ತದೆ ಅಮುಗಿದೇವನು ಊರು ಬಿಟ್ಟು ಹೋಗುವಾಗ ಆ ಹೊರೆಯನ್ನು ನನ್ನ ವಶಕ್ಕೆ ಕೊಟ್ಟು ಹೋದನು. ಬಿಟ್ಟು ಹೋದ ಆ ಹೊರೆಯನ್ನು ಹೊತ್ತುಕೊಂಡು ಹೋಗುವಲ್ಲಿ ಅದು ಭಾರವಾಗಿ ನನ್ನ ಗೋಣು ನೋಯುತ್ತಿದೆ. 'ಎನ್ನ ಭಕ್ತಿಯ ಕಣಿಯು, ಎನ್ನ ತೃಪ್ತಿಯ ಸುಧೆಯು' ಎನ್ನಯ್ಯ ಅಮುಗಿದೇವಯ್ಯನು ಹೊರಿಸಿದ್ದ ಹೊರೆ ಹೊತ್ತು ತಲೆ ನೋವಾಗಿದೆ ಮೆಲ್ಲಗೆ ಮಜ್ಜನಮಾಡಿರಿ ಎಂಬ ಧ್ವನಿ ರಿಂಗಣಿಸಿತು.

ಇಲ್ಲಿ ಅಮುಗಿದೇವಯ್ಯರ ಭಕ್ತಿ, ಶ್ರದ್ಧೆ, ಶಿವನನ್ನೊಲಿಸಿಕೊಂಡ ಪರಿಯ ಘಟನೆ ಜಗದ ಜನರೆಲ್ಲ ಬೆರಗಾಗುವಂಥದ್ದು. ಶಿವನ ತಲೆಯ ಮೇಲೆಯೆ ಗಂಟು ಹೊರಿಸಿದನೆಂಬ ಶಿವಲಿಂಗದಿಂದ ಬರುವ ಧ್ವನಿ ಕೇಳಿ ಯೋಗಿ ಸಿದ್ಧರಾಮ ಬೆರಗಾದರು. 'ಲಿಂಗ ಪ್ರಭೆ'ಯ ಮಹಾಮನೆಯೊಳಗೆ ಗೋಡೆ, ಮಾಳಿಗೆ, ನೆಲ ಎಂಬ ಅಜ್ಞಾನದ ಭ್ರಮೆಗಳನ್ನು ಮೀರಿ ಸರ್ವನಿವಾಸಿತನಾಗಿರುವ ಲಿಂಗಶರಣ ಅಮುಗಿದೇವಯ್ಯ. ಆದರೆ ನಾನು ಮಾಡುತ್ತಿರುವುದೇನು? ಅಹಂಕಾರದ ಪಂಜರದೊಳಗೆ ಇನ್ನೂ ಕಾಯದ ಕಳವಳ ಹಿಂಗದೆ ಸಕಲ ಸಿದ್ಧಿಪಡೆದೆನೆಂಬ ಭ್ರಮೆಯಲ್ಲಿ ಮುಳುಗಿದೆನೆ? ಎಂದುಕೊಂಡ ಸಿದ್ಧರಾಮ ತನ್ನನ್ನೇ ತಾನು ಪ್ರಶ್ನಿಸಿಕೊಳ್ಳುತ್ತಾ ಮಾಡಿದ ತಪ್ಪಿನ ಬಗ್ಗೆ ಕಳವಳಿಸುತ್ತಾ, ಲಗುಬಗೆಯಿಂದ ಅಮುಗಿದೇವಯ್ಯರನ್ನು ಅರಸುತ್ತಾ ಹೊರಟರು.

ಶಿವಪುರದಲ್ಲಿದ್ದ ದೇವಯ್ಯರನ್ನು ಕಂಡು ಸಿದ್ಧರಾಮರು ಆನಂದಭಾಷ್ಪ ಸುರಿಸಿದರು. ಪಶ್ಚಾತ್ತಾಪದ ಸ್ವರದಲ್ಲಿ ಎನ್ನೊಳಗಿನ ಕಾಯದ ಕಳವಳ ಹಿಂಗದೆ ಯೋಗ ಶಿವಯೋಗವೆಂಬ ಸಂಭ್ರಮದ ಮದದಲ್ಲಿ ಹಣೆಗಣ್ಣಿನ

ಉರಿಬಿಡುವೆನೆಂದು ಬೀಗುತ್ತಿರುವ ನಾನೆಲ್ಲಿ? ಅನಂತ ಹಣೆಗಣ್ಣುಗಳನ್ನು ಪಡೆಯಬಲ್ಲಂಥ ಲಿಂಗಪ್ರಭೆಯ ಶರಣನನ್ನು ಯಾವ ಉರಿ ಏನು ಮಾಡಬಲ್ಲದು? ಎಂದ ಸಿದ್ಧರಾಮರು ಅಮುಗಯ್ಯನವರಲ್ಲಿ ಕ್ಷಮೆ ಕೋರಿ ಸೋಲಾಪುರಕ್ಕೆ ಹಿಂದಿರುಗಬೇಕೆಂದು ಒತ್ತಾಯಿಸಿದರು.

ಸಿದ್ಧರಾಮರ ನೊಸಲ ಕಣ್ಣಿನ ಕಿಚ್ಚು ಉಡುಗಿದ ಪರಿಯ ಕಂಡು ಅಮುಗಯ್ಯನವರ ಹೃದಯ ಹಿಂಡಿ ಹಿಪ್ಪೆಯಾಗುತ್ತದೆ. ಸಿದ್ಧರಾಮರ ಮನದ ಸಂತಾಪವನ್ನು ನೀಗಿಸಿ ಸಾಂತ್ವನ ಹೇಳುತ್ತಾರೆ. ಮುಂದೆ 'ಇಬ್ಬರೂ ಕಲ್ಯಾಣದಲ್ಲಿ ಕೂಡಿಯೇ ಇರುವುದಿದೆಯಲ್ಲ' ಎಂದು ಸೂಚಿಸುತ್ತಾರೆ.

> **"ಸಿದ್ಧರಾಮನ ಕಳಿಸಿ ಎದ್ದ ಶಿವಪುರ ಬಿಟ್ಟು**
> **ಹೊದ್ದು ಶಿವನುಡಿಯ ಮೈತುಂಬ। ಅಮುಗಯ್ಯ**
> **ಮೆದ್ದುದಕೆ ಸೇರಿ ಕಲ್ಯಾಣ"**

ಸಿದ್ಧರಾಮರಿಗೆ ಸಂತೈಸಿದ ದೇವಯ್ಯ ನಂತರ ಕಲ್ಯಾಣಾಭಿಮುಖಿ ಯಾಗಿ ನಡೆದರೆಂದು ಕಥೆಯ ರೂಪದಲ್ಲಿ ಮತ್ತು ಜನಪದರ ನುಡಿಯಲ್ಲಿ ನಿರೂಪಿತವಾಗಿದೆ.

■■

ಕಲ್ಯಾಣದಲ್ಲಿ ಅಮುಗಿದೇವಯ್ಯ

ಸಿದ್ಧರಾಮರ ಆಗ್ರಹ ಪಾಲಿಸಲು ಸೊನ್ನಲಿಗೆ ಬಿಟ್ಟು ಕಲ್ಯಾಣಕ್ಕೆ ಅಮುಗಯ್ಯನವರು ಬರುವ ಪರಿಯಂತೆ ಎಲ್ಲಾ ಕಡೆಗಳಿಂದ ಹರಿದು ಬರುವ ಜನಸಾಗರಕ್ಕೆ ಜನಪದರು ಹೇಳುತ್ತಾರೆ.

> **"ಸೋಸಿ ವಚನದ ತಿರುಳ ಬೀಸಿದವು ಶಿವಗಾಳಿ**
> **ಮೂಸಿಬಂದಂತೆ ಗುಂಗಿಗಳು । ಹೂಗಳಿಗೆ**
> **ರಾಸಿ ಜನ ಬಂತು ಮಂಟಪಕೆ."**

ವಚನಗಳ ಶಿವಗಾಳಿ ಎಲ್ಲಕಡೆಗೂ ಪಸರಿಸಿದಾಗ ಹೂವುಗಳ ಸುಂಗಧವನ್ನು ಹೀರಲು ದುಂಬಿಗಳು ಬರುವ ವೇಗದಂತೆಯೆ ಅನುಭವ

ಮಂಟಪಕ್ಕೆ ಜನರು ರಾಶಿ ರಾಶಿಯಾಗಿ ಬರುತ್ತಿದ್ದರಂತೆ ಹಾಗೆಯೆ ದೇವಯ್ಯನವರು ಬರುತ್ತಿದ್ದರಂತೆ.

ಸೊನ್ನಲಿಗೆಯಲ್ಲಿ ನೆಯ್ಗೆಯ ಕಾಯಕ ಮಾಡಿಕೊಂಡಿದ್ದ ಅಮುಗಿದೇವಯ್ಯ-ರಾಯಮ್ಮನವರು ಕಲ್ಯಾಣಕ್ಕೆ ಬಂದರು. ಪರಿಮಳದ ಬೀಜವೆ ಮೊಳಕೆಯೊಡೆದು ಹುಟ್ಟಿದರೆ ಸುಗಂಧವಾಸನೆಗಾಗಿ ಹೂವಿನ ಹಾದಿಕಾಯುವ ಅವಶ್ಯಕತೆಯಿಲ್ಲ. ಅಂತೆಯೆ ಅನುಭವ ಮಂಟಪವೆಂಬ ಮಹಾಮನೆಯಲ್ಲಿ ಬಸವಾದಿ ಶರಣರಲ್ಲಿ ಲಿಂಗವೆ ಮೊಳಕೆಯೊಡೆದು ಹೂವಿಲ್ಲದೆ ಸುಗಂಧವಾಸನೆಯ ಪರಿಮಳ ಸೂಸುತ್ತಿದೆ. "ವಚನ ಮಂಟಪ ಬಳ್ಳಿ ಸುಚಿಮೊಗ್ಗೆ ಹೂಬಿಡಲು, ರುಚಿಜೇನ ಹುಟ್ಟ ಹೊಸಮತವ । ಕಟ್ಟಿದರು, ವಚನ ಶಾಸ್ತ್ರಕರು ನಾಡೊಳಗೆ". ಅನುಭವ ಮಂಟಪದ ಒಳಗೆ ಪ್ರವೇಶಿಸಿ ನೋಡಿದರೆ ಎತ್ತ ನೋಡಿದಡತ್ತ ಇಷ್ಟಲಿಂಗಧಾರಿಗಳಾದ ಶರಣರು. ಅವರ ಮೊಗದಲ್ಲಿ ಲಿಂಗಕಾಂತಿಯ ತೇಜಸ್ಸು, ವಚನಗಳ ಅನುಭಾವದ ಸುಧೆ ಹರಿಯುತ್ತಿರುವುದನ್ನು ನೋಡಿ ಅಮುಗಿದೇವಯ್ಯ ಆನಂದಲ್ಲಿ ತೇಲಾಡಿದರು.

"ಮಿದ್ದಿದನು ಶಿವಗೋಷ್ಠಿ ಬಿದ್ದು ವೇದಗಳಂದು
ಹುದ್ದೆ ಹೊಂದಿದವು ಜಗದೊಳಗೆ । ವಚನಗಳ
ಸುದ್ದಿ ನಾಡ್ತುಂಬಿ ಜನಹಿಗ್ಗಿ"

ಕಲ್ಯಾಣದಲ್ಲಿ ಶಿವಗೋಷ್ಠಿ ಪ್ರಖರವಾಗಿ ವೇದಗಳು ಹಿಂದೆ ಸರಿದು ವಚನಗಳೇ ವಿಜೃಂಭಿಸಿದವು. ನಾಡಿನ ತುಂಬೆಲ್ಲಾ ವಚನಗಳ ಸಂಚಲನದಿಂದ ಜನರೆಲ್ಲಾ ಹಿಗ್ಗಿನಿಂದ ಕಲ್ಯಾಣದ ಕಡೆಗೆ ಧಾವಿಸುತ್ತಿದರು. ಅಂತಹ ಅದ್ಭುತವಾದ ಆಚಾರ-ವಿಚಾರಗಳ ನಡೆ-ನುಡಿ ಸಿದ್ಧಾಂತವನ್ನು ಕಂಡ ಅಮುಗಯ್ಯನವರ ಮನ ಹರ್ಷಗೊಂಡಿತು.

■■

ಅನುಭವ ಮಂಟಪದಲ್ಲಿ ಅಮುಗಿದೇವಯ್ಯ

ಅಮುಗಿದೇವಯ್ಯನವರು ಅನುಭವ ಮಂಟಪದ ಶರಣರ ಜೊತೆಗೆ ಅನುಭಾವದಲ್ಲಿ ಒಡಗೂಡಿ ಇಷ್ಟಲಿಂಗ ನಿಷ್ಠೆಯಿಂದ ಕಂಗೊಳಿಸುತ್ತಿದ್ದರು.

"ನೇಗಿಕಾಯಕ ಹೂಡಿ ತಾಗುಬಾಗಿನ ಶರಣ, ಕೂಗಿ ನೇಯುತಲಿ ಕಲ್ಯಾಣ। ಮಂಟಪವು, ಬಾಗಿ ಶರಣೆಂದು ಬಾರೆಂದು". ಕಲ್ಯಾಣದಲ್ಲಿನ ಶರಣರು ದೇವಯ್ಯನವರನ್ನು ಮನದುಂಬಿ ಸ್ವಾಗತಿಸಿದರು. ದೇವಯ್ಯನವರು ಕಲ್ಯಾಣದಲ್ಲಿಯೂ ನೆಯ್ಗೆಯ ಕಾಯಕವನ್ನು ಮುಂದುವರಿಸಿದರು. ತಮ್ಮ ಕಾಯದಿಂದ ಬಂದದ್ದರಲ್ಲಿ ಜಂಗಮ ದಾಸೋಹ ನಡೆಸುವುದು ಅವರ ವ್ರತವಾಗಿತ್ತು.

ಅಮುಗಿದೇವಯ್ಯನವರು "ಸಿದ್ಧಸೋಮನಾಥಾ" ಎಂಬ ವಚನಾಂಕಿತದಿಂದ ರಚಿಸಿದ ಕೇವಲ ೩೦ ವಚನಳು ಮಾತ್ರ ಲಭ್ಯವಾಗಿವೆ. ಅಮುಗೆರಾಯಮ್ಮ ಪತಿಯ ಜೊತೆಗೆ ನೆಯ್ಗೆಯ ಕಾಯಕ ಮಾಡುತ್ತ ಇಷ್ಟಲಿಂಗ ಪೂಜೆಯೊಂದಿಗೆ ಅನುಭಾವಗೊಷ್ಠಿಯಲ್ಲಿ ಪಾಲ್ಗೊಳ್ಳುತ್ತಿದ್ದರು. ಶ್ರೇಷ್ಠ ವಚನಕಾರ್ತಿಯಾಗಿ ಮತ್ತು ಆಚಾರಶೀಲರಾದ ಅಮುಗಿ ರಾಯಮ್ಮನವರು ರಚಿಸಿದ ವಚನಗಳು ಆಚಾರಪ್ರಧಾನವಾಗಿವೆ. ಅರಿವುಳ್ಳವರಿಗೆ ಗುರುವಿನ ಹಂಗೇಕೆ ? ಎಂದು ವಿಮರ್ಶಾತ್ಮಕವಾಗಿ ಮತ್ತು ತೀಕ್ಷವಾಗಿ ಪ್ರಶ್ನೆ ಮಾಡುವ ವಚನಗಳಿವೆ. ಕಲ್ಯಾಣದಲ್ಲಿ ಶರಣ ಸಂಕುಲದೊಳಗೆ ಬೆರೆತು ಅನೋನ್ಯವಾಗಿ ಇರುವ ದಂಪತಿ ಅನುಭವ ಮಂಟಪದ ಸದಸ್ಯರಾದರು.

'ದೇವ ನೀನಿರಿಸಿದಂತೆ ಇರುವೆನು' ಎಂದು ಹೇಳುವ ಅಮುಗಿದೇವಯ್ಯನವರು ಆದರ್ಶ ಜೀವನದ ಪರಿಯನ್ನು ಸೂಚಿಸುತ್ತಾರೆ.

ಇಹಪರನಲ್ಲ, ಪರಾಪರನಲ್ಲ,
ಭಾವಿಸಿ ಭಾವಿಯಲ್ಲ,
ಕಾಮಿಸಿ ಕಾಮಿಯಲ್ಲ,
ಅನಾಯಾಸ ನಿರಂಜನನು ಸಿದ್ಧಸೋಮನಾಥಲಿಂಗಾ
ನಿಮ್ಮ ಶರಣ ಬಳಸಿ ಬಳಸುವನಲ್ಲ.

–ಅಮುಗಿದೇವಯ್ಯ

ಶರಣರ ಮನಸ್ಸು ಪರಿಣಿತ ಮತ್ತು ಸಮತೋಲನ ದೃಷ್ಟಿಯಿಂದ ಕೂಡಿತ್ತೆಂದು ತಿಳಿಸುವ ನಿಟ್ಟಿನಲ್ಲಿ ದೇವಯ್ಯನವರು ತಮ್ಮ ವಚನಗಳಲ್ಲಿ

ಶರಣರ ವ್ಯಕ್ತಿತ್ವದ ಪರಿಚಯುವನ್ನು ಮಾಡಿಕೊಡುವಂತಿವೆ. "ಊಷ್ಮದೊರತೆಯಂತೆ, ಬಿಸಿಲ ನೆಳಲಿನಂತೆ, ಬೆಟ್ಟದ ಶಬ್ದ, ಉರಿಯ ನೆಳಲು, ಮಂಜಿನ ಮಳೆಯಂತೆ ಸುಳಿವ, ಸಿದ್ಧಸೋಮನಾಥಾ ನಿಮ್ಮ ಶರಣ". ಶರಣರ ಇರುವಿಕೆಯು ಹೇಗಿತ್ತು ಎಂದರೆ ಬೆಟ್ಟದಲ್ಲಿ ಕೂಗಿದಡೆ ಆ ಶಬ್ದದ ಪ್ರತಿಧ್ವನಿ ಎಲ್ಲಾ ಕಡೆಗೂ ರಿಂಗಣಿಸುವಂತೆ ಬೇಸಿಗೆಯಲ್ಲಿನ ತಂಪು ತನುವಿಗೆ ಮುದ ನೀಡುವಂತೆ, ನಿಸರ್ಗದ ಸೊಬಗಿನಲ್ಲಿ ಮಂಜಿನ ಮಳೆಯ ಸೌಂದರ್ಯದ ಹಾಗೆ ಸಿದ್ಧಸೋಮನಾಥಾ ನಿಮ್ಮ ಶರಣರ ಸುಳಿವಿನ ಪರಿಯು ಎಂಥಾ ಅದ್ಭುತವಾಗಿದೆ.

ಅಮುಗಿದೇವಯ್ಯನವರು ಉನ್ನತವಾದ ವಿಚಾರವಾದಿಯಾಗಿದ್ದರು. ಅವರು ತಮ್ಮ ಅನುಭಾವದೊಂದಿಗೆ ವಚನ ಚಳವಳಿಯ ಮೂಲಕ ಜನಮನದಲ್ಲಿ ನೆಲೆನಿಂತಿದ್ದಾರೆ. ಕಲ್ಯಾಣಕ್ಕೆ ಬಂದ ನಂತರ ಎಲ್ಲಾ ಶರಣರಿಂದ ಪರಮಪ್ರಸಾದವನ್ನು ನಾನಾ ಬಗೆಯಲ್ಲಿ ಪಡೆದುಕೊಂಡು ಬದುಕಿದೆನಯ್ಯಾ ಎಂದು ತಮ್ಮ ವಚನವೊಂದರಲ್ಲಿ ವ್ಯಕ್ತಪಡಿಸಿದ್ದಾರೆ.

ಕಕ್ಕಯ್ಯನ ಪ್ರಸಾದವ ಕೊಂಡೆನ್ನ ಕುಲಸೂತಕ ಹೋಯಿತಯ್ಯಾ.
ಚೆನ್ನಯ್ಯನ ಪ್ರಸಾದವ ಕೊಂಡೆನ್ನ ಛಲಸೂತಕ ಹೋಯಿತಯ್ಯಾ.
ದಾಸಯ್ಯನ ಪ್ರಸಾದವ ಕೊಂಡೆನ್ನ ತನುಸೂತಕ ಹೋಯಿತಯ್ಯಾ.
ಚಂದಯ್ಯನ ಪ್ರಸಾದವ ಕೊಂಡೆನ್ನ ಮನಸೂತಕ ಹೋಯಿತಯ್ಯಾ.
ತೆಲಗ ಜೊಮ್ಮಯ್ಯನ ಪ್ರಸಾದವ ಕೊಂಡೆನ್ನ ನೆನಹುಸೂತಕ ಹೋಯಿತಯ್ಯಾ.
ಬಿಬ್ಬಿ ಬಾಚಯ್ಯನ ಪ್ರಸಾದವ ಕೊಂಡೆನ್ನ ಭಾವಸೂತಕ ಹೋಯಿತಯ್ಯಾ.
ಮೋಳಿಗಯ್ಯನ ಪ್ರಸಾದವ ಕೊಂಡೆನ್ನ ಜನನಸೂತಕ ಹೋಯಿತಯ್ಯಾ.
ಕೋಲ ಶಾಂತಯ್ಯನ ಪ್ರಸಾದವ ಕೊಂಡೆನ್ನ ಅಂತರಂಗದ ಸೂತಕ ಹೋಯಿತಯ್ಯಾ.
ಮೇದಾರ ಕೇತಯ್ಯನ ಪ್ರಸಾದವ ಕೊಂಡೆನ್ನ ಬಹಿರಂಗದ ಸೂತಕ ಹೋಯಿತಯ್ಯಾ.
ಘಟ್ಟಿವಾಳಯ್ಯನ ಪ್ರಸಾದವ ಕೊಂಡೆನ್ನ ಸರ್ವಾಂಗದ ಸೂತಕ ಹೋಯಿತಯ್ಯಾ.
ಬಸವಣ್ಣ, ಚನ್ನಬಸವಣ್ಣ, ಪ್ರಭುದೇವರು, ಮಡಿವಾಳಯ್ಯ, ಸಿದ್ಧರಾಮಯ್ಯ,
ಸೊಡ್ಡಳ ಬಾಚರಸರು, ಹಡಪದಪ್ಪಣ್ಣ, ಶಂಕರ ದಾಸಿಮಯ್ಯ,
ಹೆಂಡದ ಮಾರಯ್ಯಾ, ಗಾಣದ ಕಣ್ಣಪ್ಪಯ್ಯ, ಕೈಕೂಲಿ ಚಾಮಯ್ಯ,

ಬಹುರೂಪಿ ಚೌಡಯ್ಯ, ಕಲಕೇತ ಬ್ರಹ್ಮಯ್ಯ ಮೊದಲಾದ
ಶಿವಗಣಂಗಳ ಪರಮಪ್ರಸಾದವ ಕೊಂಡು ಬದುಕಿದೆನಯ್ಯಾ,
ಮಹಾಘನ ಸದ್ಗುರು ಸಿದ್ಧಸೋಮನಾಥಲಿಂಗವೆ
ನಿಮ್ಮ ಧರ್ಮ, ನಿಮ್ಮ ಧರ್ಮ.

–ಅಮುಗಿದೇವಯ್ಯ

ಅನುಭವ ಮಂಟಪದಲ್ಲಿ ತಾನು ಪಡೆದ ಅನುಭವದ ಮೂಲಕ ಬಸವಾದಿ ಶರಣರ ಪ್ರಸಾದಿಂದ ಎನ್ನ ಸೂತಕಗಳನ್ನು ಕಳೆದುಕೊಂಡೆನು. ಪ್ರಸಾದ ಎಂದರೆ ಶರಣರೆಲ್ಲರಿಂದ ಕಲಿತದ್ದು, ಜ್ಞಾನಾರ್ಜಿಸಿದ್ದು ಅಥವಾ ಅನುಭವಿಸಿದ್ದು ಎಂದು ಅಮುಗಿದೇವಯ್ಯನವರು ಹೇಳುತ್ತಾರೆ. ಬಸವಣ್ಣ, ಚನ್ನಬಸವಣ್ಣ, ಪ್ರಭುದೇವರು, ಮಡಿವಾಳಯ್ಯ, ಸಿದ್ಧರಾಮಯ್ಯ ಮೊದಲಾದ ಶಿವಗಣಂಗಳ ದಯೆಯಿಂದ ಬದುಕಿದೆನಯ್ಯಾ ನಿಮ್ಮ ಕರಣೆಯೆ ನನಗೆ ಸರ್ವಸ್ವ ಸಿದ್ಧಸೋಮನಾಥಲಿಂಗವೆ ಎಂದು ಭಕ್ತಿಯಿಂದ ಹೇಳುತ್ತಾರೆ.

ಹುಡಿ ಹುತ್ತದ ಗಾಳಿಯಂತೆ,
ಕಾಡಿಗೆ ಹತ್ತದಾಲಿಯಂತೆ,
ನೆಯ್ ಹತ್ತದ ನಾಲಗೆಯಂತೆ,
ಮಂಗಳ ಮಣ್ಣ ಬೆರಸದಂತೆ, ಸಿದ್ಧಸೋಮನಾಥಾ,
ನಿಮ್ಮ ಶರಣನು ಸಕಲಸುಖಂಗಳ ಸುಖಿಸಿಯೂ ಬೇರಿಪ್ಪನು.

–ಅಮುಗಿದೇವಯ್ಯ

ಅಮುಗಿದೇವಯ್ಯನವರು ಶರಣರಂತೆ ಸಕಲ ಸುಖಂಗಳ ಸುಖಿಸಿ ಬೇರಿದ್ದವರು. ಗೆದ್ದಲು ಕಟ್ಟಿದ ಮಣ್ಣಿನ ಧೂಳು ಎಷ್ಟೇ ಗಾಳಿ ಬೀಸಿದರೂ ಆ ಗಾಳಿಗೇನೂ ಧೂಳು ಹತ್ತುವುದಿಲ್ಲ. ಕಣ್ಣಿಗೆ ಕಾಡಿಗೆ ಹಚ್ಚಿದರೂ ಕಣ್ಣಾಲಿಗೆ ಕಾಡಿಗೆ ಹತ್ತುವುದಿಲ್ಲ. ನಾಲಿಗೆ ಮೇಲೆ ತುಪ್ಪ ಇಟ್ಟರೆ ನಾಲಿಗೆಗೆ ಅಟ್ಟಿಕೊಳ್ಳುತ್ತದೆಯೇ ? ಶುಭ ಕಾರ್ಯದಲ್ಲಿ ಮಣ್ಣ ಬೆರಸದಂತೆ, ಶರಣರು ಎಲ್ಲಾ ಸುಖಗಳನ್ನೂ ಒಳಗೊಳ್ಳದೆ ಬೇರೆಯಾಗಿರುವರು. ಅಂದರೆ ಸಂಸಾರದೊಳಿದ್ದರೂ ಅದಕ್ಕೆ ಅಂಟಿಕೊಳ್ಳದಂತೆ ಇದ್ದವರು. ಅಂತೆಯೆ ಚನ್ನಬಸವಣ್ಣನವರು

ಬೇಕೆನಲಾಗದು ಶರಣಂಗೆ,
ಬೇಡನಲಾಗದು ಶರಣಂಗೆ,
ಬಂದ ಸುಖವನತಿಗಳೆಯಲಾಗದು ಶರಣಂಗೆ,
ಇದು ಕಾರಣ, ಕೂಡಲಚನ್ನಸಂಗಯ್ಯಾ
ನಿಮ್ಮ ಶರಣರು ಉಂಡು ಉಪವಾಸಿಗಳು, ಬಳಸಿ ಬ್ರಹ್ಮಚಾರಿಗಳು.

–ಚನ್ನಬಸವಣ್ಣ

ಶರಣರಿಗೆ ಯಾವುದೆ ರೀತಿಯ ವಸ್ತುಗಳ ವ್ಯಾಮೋಹವಿಲ್ಲ. ಏನೇ ಬರಲಿ ಬಂದದ್ದನ್ನು ಲಿಂಗಕ್ಕೆ ಅರ್ಪಿಸಿ ಸ್ವೀಕರಿಸುತ್ತಾರೆ. ಅವರು ಸಂಸಾರದಲ್ಲಿದ್ದುಕೊಂಡು ಇಲ್ಲದಂತೆ ಎಲ್ಲವನ್ನು ಮೀರಿ ಸಾಧನೆಗೈದು ಮುಕ್ತಿಪಥವ ಕಂಡುಕೊಂಡು ಲಿಂಗಾಂಗಸಾಮರಸ್ಯ ಹೊಂದಿದವರು.

ಅನುಭವ ಮಂಟಪದಲ್ಲಿ ಬಸವಣ್ಣನವರು ಸಾಮಾನ್ಯರಲ್ಲಿ ಸಾಮಾನ್ಯರಾದ ವ್ಯಕ್ತಿಗಳನ್ನು ಯಾವುದೇ ಭೇದ- ಭಾವವಿಲ್ಲದೆ ಸಮಾನತೆ ನೀಡಿ ಎಂತಹ ಉನ್ನತ ಮಟ್ಟಕ್ಕೆ ಬೆಳಸಿದರೆಂಬದುಕ್ಕೆ ಅವರ ವಚನಗಳೆ ಸಾಕ್ಷಿಯಾಗಿವೆ.

ಉಂಡು ಉಪವಾಸಿಯಾದನಾಗಿ, ಬಳಸಿ ಬ್ರಹ್ಮಚಾರಿಯಾದನಾಗಿ,
ಕಂಡೂ ಕಾಣದಂತೆ ಇದ್ದನಾಗಿ,
ಅಂಗವೆಂಬ ಭಾವ, ಲಿಂಗವೆಂಬ ಕುರುಹು, ನಿರಂಗವೆಂಬ ಅರಿವು,
ತ್ರಿವಿಧದ ಕುರುಹು ಅಲ್ಲಿಯೆ ಅಡಗಿತ್ತು.
ಉರಿಯ ತುದಿಯ ಕರ್ಪುರದಂತೆ, ಅಡಗಿದ ಭೇದವ ಸಡಗರಿಸಿದಲ್ಲಿ,
ಕಾಮಧೂಮ ಧೂಳೇಶ್ವರನೆಂಬ ಭಾವ ಕಲ್ಪಿತವಿಲ್ಲ.

–ಮಾದಾರ ಧೂಳಯ್ಯ

ಚಿನ್ಮಯಜ್ಞಾನಿ ಚನ್ನಬಸವಣ್ಣನವರ ನುಡಿಯಂತೆಯೆ ಶರಣ ಮಾದಾರ ಧೂಳಯ್ಯನವರು ಉಂಡು ಉಪವಾಸಿಯಾದನಾಗಿ, ಬಳಸಿ ಬ್ರಹ್ಮಚಾರಿ ಯಾದನಾಗಿ ಎಂದು ಹೇಳುತ್ತಾರೆ. ಅಂಗವೆಂಬ ಭಾವವು, ಲಿಂಗವೆಂಬ ಕುರುಹು ಮತ್ತು ನಿರಂಗವೆಂಬ ಅರಿವು ಇವು ಮೂರು ಒಂದಾದ ಬಳಿಕ ಕರ್ಪುರವು ಉರಿದು ಸುಗಂಧ ಬೀರುತ್ತಲೆ ಅಂತ್ಯಗೊಳ್ಳುವಂತೆ, ಶರಣರು

ತಮ್ಮ ಇರುವಿಕೆಯ ಪರಿಮಳ ಸೂಸುತ್ತಲೆ ಬಾಳಿದವರು. ಅವರು ಉಂಡು ಉಪವಾಸಿಗಳಾದರು ಬಳಸಿ ಬ್ರಹ್ಮಚಾರಿಗಳಾದರು. ಎಲ್ಲವನ್ನು ಅನುಭವಿಸಿದರೂ ಯಾವದಕ್ಕೂ ಅಂಟಿಕೊಳ್ಳದೆ ಬದುಕಿದರು. ಶರಣರು ದೇವರನ್ನು ಒಲಿಸಿಕೊಳ್ಳುವ ಪರಿಯಲ್ಲಿ ಒಳಹೊಕ್ಕು ಅಂತರಾಳದಲ್ಲಿ ಅಡಗಿದ ಭೇದವನ್ನು – ಅರಿತುಕೊಂಡು ಆಚರಣೆಯಲ್ಲಿ ಆನಂದವನ್ನು ಅನುಭವಿಸಿ ಸಂಭ್ರಮಿಸಿದರು.

ಅಮುಗಿದೇವಯ್ಯನವರ ಇಷ್ಟಲಿಂಗ ನಿಷ್ಠೆಯು ಪ್ರಖರ ವೈಚಾರಿಕತೆಯ ನೆಲೆಯಲ್ಲಿತ್ತು. ಶಿವನ ನೆನೆದರೆ ಭವಬಂಧನದಿಂದ ಮುಕ್ತರಾಗುತ್ತೇವೆ ಎನ್ನುತ್ತಾರೆ.

ಶಿವನ ನೆನೆದಡೆ ಭವ ಹಿಂಗೂದೆಂಬ
ವಿವರಗೇಡಿಗಳ ಮಾತ ಕೇಳಲಾಗದು.
ಹೇಳದಿರಯ್ಯಾ, ಜ್ಯೋತಿಯ ನೆನೆದಡೆ ಕತ್ತಲೆ ಕೆಡುವುದೆ?
ಇಷ್ಟಾನ್ನವ ನೆನೆದಡೆ ಹೊಟ್ಟೆ ತುಂಬುವುದೆ?
ರಂಭೆಯ ನೆನೆದಡೆ ಕಾಮದ ಕಳವಳವಡಗುವುದೆ ಅಯ್ಯಾ ?
ನೆನೆದರಾಗದು, ನಿಜದಲ್ಲಿ ನಿರ್ಧರಿಸಿ ತಾನು ತಾನಾಗದನ್ನಕ್ಕರ,
ಸದ್ಗುರು ಸಿದ್ಧಸೋಮನಾಥಲಿಂಗನ ನೆನೆಯಬಾರದು.

–ಅಮುಗಿದೇವಯ್ಯ

ದೇವಯ್ಯನವರು ಅರಿಯದೆ ಆಡುವಂಥ ತಿಳಿಗೇಡಿಗಳ ಮಾತನ್ನು ಕೇಳಲಿಕ್ಕಾಗದು. ಹೇಳದಿರಯ್ಯಾ ಎನ್ನುತ್ತಾರೆ. ಅಂದರೆ ಮೂಢನಂಬಿಕೆ ಉಳ್ಳವರ ವಿಚಾರದಲ್ಲಿ ಕಠೋರ ಭಾವ ತಾಳುತ್ತಾರೆ. ಜ್ಯೋತಿಯ ನೆನೆದಡೆ ಕತ್ತಲೆ ಕೆಡುವುದೆ? ಕತ್ತಲಾದಾಗ ದೀಪ ಹಚ್ಚುವ ಬದಲು ಕೇವಲ ಬೆಳಕನ್ನು ನೆನೆದರೆ ಕತ್ತಲೆ ಕಳೆಯುವುದೆ? ಹಸಿವಾದಾಗ ಆಹಾರವನ್ನು ಸೇವಿಸದೆ ಬರಿ ನೆನೆಯುತ್ತಿದ್ದರೆ ಹೊಟ್ಟೆ ತುಂಬುವುದೆ? ಅದರಂತೆ ಸುರಸುಂದರಿಯರಲ್ಲಿ ಪ್ರಸಿದ್ಧಳಾದ ರಂಭೆಯ ನೆನೆದರೆ ಕಾಮ ಶಮನವಾಗುವುದೆ? ಎಂದು ಪ್ರಶ್ನಿಸುತ್ತಾರೆ. ಸತ್ಯವನ್ನು ಪ್ರತಿಪಾದಿಸುವ ಉದ್ದೇಶದಿಂದ ಇಲ್ಲಿ ಜ್ಞಾನ ಮತ್ತು ಕ್ರಿಯೆಯ ಬಗ್ಗೆ ತಿಳಿಸಿದ್ದಾರೆ.

ಪ್ರತಿಯೊಬ್ಬ ವ್ಯಕ್ತಿ ನಿಜದ ನಿಲುವನ್ನು ತಾಳಿ ತನ್ನ ಒಳಗಿನ ಘನವನ್ನು ಅರಿಯಬೇಕಾದರೆ ನಿಜಸ್ವರೂಪದರ್ಶನ ಮಾಡಿಕೊಳ್ಳಬೇಕೆನ್ನುತ್ತಾರೆ. ಲೋಕದ ಜನರ ಸುಖ ದುಃಖಗಳನ್ನು ತನ್ನ ಸುಖ ದುಃಖಗಳೆಂದು ಭಾವಿಸಬೇಕಾಗುತ್ತದೆ. ಆಗ ಮಾತ್ರ ದೇವರು ಒಲಿಯುವನು. ನಿಜದಲ್ಲಿ ನಿರ್ಧರಿಸಿ ತಾನಾರೆಂಬುದು ಅರಿತಾಗ ಸದ್ಗುರು ಸಿದ್ಧಸೋಮನಾಥ ಲಿಂಗವೇ ತಾನಾಗುತ್ತಾನೆ ಎನ್ನುತ್ತಾರೆ. ಅಂತೆಯೆ ಬಸವಣ್ಣನವರು ಹೇಳುತ್ತಾರೆ.

ಕೆಂಚ ಕರಿಕನ ನೆನೆದಡೆ ಕರಿಕನಾಗಬಲ್ಲನೇ ?
ಕರಿಕ ಕೆಂಚನ ನೆನೆದಡೆ ಕೆಂಚನಾಗಬಲ್ಲನೆ ?
ದರಿದ್ರ ಸಿರಿವಂತನ ನೆನೆದಡೆ ಸಿರಿವಂತನಾಗಬಲ್ಲನೆ ?
ಸಿರಿವಂತ ದರಿದ್ರನ ನೆನೆದಡೆ ದರಿದ್ರನಾಗಬಲ್ಲನೆ ?
ಮುನ್ನಿನ ಪುರಾತರ ನೆನೆದು ಧನ್ಯನಾದೆಹೆನೆಂಬ
ಮಾತಿನ ರಂಜಕರನೇನನೆಂಬೆ,
ಕೂಡಲಸಂಗಮದೇವಾ ?

–ಬಸವಣ್ಣ

ಕೇವಲ ಬರಿಯ ಮಾತಿನಲ್ಲಿ ನೆನೆಯುತ್ತಾ ಮತ್ತು ಜಪಿಸುತ್ತಾ ಕಳಿತುಕೊಂಡರೆ ಏನನ್ನೂ ಸಾಧಿಸಲು ಆಗುವುದಿಲ್ಲ. ಕಪ್ಪು ಬಣ್ಣವಿದ್ದವರು ಕೆಂಚನಾಗಲೆಂದು ನೆನೆದರೆ ಕಪ್ಪಾಗಿದ್ದ ಬಣ್ಣ ಬಿಳಿಯಾಗಲು ಸಾಧ್ಯವಿದೆಯೆ? ಹಾಗೆಯೆ ಕೆಂಚಗಾಗಿದ್ದವರು ಕಪ್ಪಾಗಾಗಬೇಕೆಂದು ನೆನೆದರೆ ಕರಿಯ ಬಣ್ಣದವರಾಗಬಹುದೆ? ಬಡವ ಶ್ರೀಮಂತನನ್ನು ನೆನೆಯುತ್ತಾ ಕುಳಿತರೆ ಶ್ರೀಮಂತನಾಗಬಹುದೇ? ಧನಿಕನೊಬ್ಬ ದರಿದ್ರನ ನೆನೆದಡೆ ದರಿದ್ರನಾಗಲು ಆಗುವುದಿಲ್ಲ. ಹೀಗೆ ಒಬ್ಬರನ್ನೊಬ್ಬರು ನೆನೆದರೆ ಅವರು ಪರಿವರ್ತನೆ ಗೊಳ್ಳುವುದು ಸಾಧ್ಯವಿಲ್ಲ. ಹಿಂದೆ ಆಗಿಹೋದ ಪುರಾತನರನ್ನು ನೆನೆಯುತ್ತಾ ಅವರ ನಾಮವನ್ನೇ ಜಪಿಸುತ್ತಾ ಕಾಲ ಕಳೆದು ಧನ್ಯತೆಯನ್ನು ಪಡೆಯುತ್ತೇವೆ. ಎಂದು ಮಾತಿನಲ್ಲಿ ರಂಜಿಸುವವರನ್ನು ಏನು ಹೇಳಬೇಕು. ವಾಸ್ತವತೆಯನ್ನು ಅರಿತು ಅಂತರಂಗದಲ್ಲಿ ಮೂಡಿಸಿಕೊಂಡು ನಿರಂತರ ಸಾಧನೆಯಿಂದ ಮಾತ್ರ ನಮ್ಮಲ್ಲಿ ಏನಾದರೂ ಬದಲಾವಣೆ ಮಾಡಿಕೊಳ್ಳಲು ಸಾಧ್ಯವಾಗುವುದು.

ಬರಿಯ ಜ್ಞಾನವಿದ್ದರೆ ಸಾಲದು ಅದು ಕ್ರಿಯೆಯಲ್ಲಿರಬೇಕು. ದೇವರನ್ನು ನೆನೆಯುತ್ತಾ ಕುಳಿತರೆ ಪ್ರಯೋಜನವಿಲ್ಲ. ಅಂತರಂಗದ ಅರಿವು ಗಟ್ಟಿಗೊಂಡು ಬಹಿರಂಗದಲ್ಲಿ ಕ್ರಿಯಾರೂಪವಾದರೆ ಅದು ಸಾರ್ಥಕವಾಗುತ್ತದೆ.

ಜ್ಞಾನದಲರಿದಡೇನಯ್ಯ, ಕ್ರೀಯನಾಚರಿಸದನ್ನಕ್ಕ ?
ನೆನೆದ ಮಾತ್ರದಲ್ಲಿ ಅಹುದೆ, ಕಾರ್ಯದಲಲ್ಲದೆ ?
ಕುರುಡ ಕಾಣ ಪಥವ, ಹೆಳವ ನಡೆಯಲರಿಯ. ಒಂದಿಲ್ಲದಿರ್ದಡೊಂದಾಗದು.
ಜ್ಞಾನವಿಲ್ಲದಿರ್ದ ಕ್ರೀ ಜಡನು. ಕ್ರೀಯಿಲ್ಲದ ಜ್ಞಾನವಾಗ್ಜಾಲ ಭ್ರಾಂತು.
ಇದು ಕಾರಣ
ಸಿದ್ಧಸೋಮನಾಥಲಿಂಗವ ಕೂಡುವ ಶರಣಂಗೆ ಎರಡೂ ಬೇಕು.
–ಅಮುಗಿದೇವಯ್ಯ

ಎಲ್ಲವೂ ನನಗೆ ತಿಳಿದಿದೆ. ಎಲ್ಲದರ ಜ್ಞಾನವೂ ನನ್ನಲ್ಲಿದೆ ಎಂದುಕೊಂಡು ಅದನ್ನು ಕಾರ್ಯಗತಗೊಳಿಸದೆ ಇರುವುದು. ಕುಂಟರು ಎಲ್ಲಾ ದಾರಿಗಳನ್ನು ಬಲ್ಲವರಾಗಿದ್ದರೂ ನಡೆಯಲಿಕ್ಕಾಗದು. ಕುರುಡರಿಗೆ ನಡೆಯುವ ಸಾಮರ್ಥ್ಯವಿದ್ದರೂ ದಾರಿ ಕಾಣರು. ಆದ್ದರಿಂದ ಜ್ಞಾನವಿಲ್ಲದೆ ಕ್ರಿಯೆ ಮಾಡಲಿಕ್ಕಾಗದು. ಕಿಯೆ ಇಲ್ಲದ ಬರಿಯ ಜ್ಞಾನವು ಮಾತಿನ ಸರಮಾಲೆಯಾಗಿ ಉಳಿಯುತ್ತದೆ. ನಾವು ಗುರಿ ಮುಟ್ಟಿದೆವು ಎಂಬ ತಪ್ಪು ತಿಳಿವಳಿಕೆಯಲ್ಲೇ ಬದುಕು ಸಾಗುತ್ತದೆ. ಆದರೆ ಶರಣರು ಜ್ಞಾನ ಮತ್ತು ಕ್ರಿಯೆ ಎಂಬ ಎರಡನ್ನೂ ಅಳವಡಿಸಿಕೊಂಡು ಬಾಳಿದವರು.

ಅಮುಗಿದೇವಯ್ಯನವರು ಉನ್ನತವಾದ ಅನುಭವವನ್ನು ಪಡೆದುಕೊಂಡವರು ಪ್ರಾಣಲಿಂಗವೆಂಬುದೊಂದು ಮಾತಿನಂತುಟಲ್ಲ. ಲೋಗರ ಸುಖದುಃಖ ತನ್ನದೆನ್ನದನ್ನಕ್ಕ ಚೆನ್ನ ಸಿದ್ಧಸೋಮನಾಥನೆಂಬ ಲಿಂಗ ಬರಿದೆ ಒಲಿವನೆ ? ಅಂಗೈಯಲ್ಲಿ ಲಿಂಗ ಹಿಡಿದು ಪೂಜೆ ಮಾಡಿದರೆ ಸಾಲದು. ಅದೇ ಪ್ರಾಣವಾಗಿಸಿಕೊಂಡು ಪೂಜಿಸಬೇಕು. ಆ ಪ್ರಾಣಲಿಂಗಪೂಜೆ ಮಾತಾಡಿದಷ್ಟು ಸುಲಭವಲ್ಲ ಅದನ್ನು ಅನುಭವಿಸಬೇಕು. ಅಂದರೆ ತನ್ನಷ್ಟಕ್ಕೆ ತಾನೆ ಕುಳಿತು ಪೂಜೆ ಮಾಡುವುದಲ್ಲ. ಇಡೀ ಸಮಾಜದಲ್ಲಿನ ಜನರ ಸುಖ–ದುಃಖಗಳಿಗೆ ಸ್ಪಂದಿಸಬೇಕು. ಸಕಲಜೀವಾತ್ಮರಿಗೆ ಲೇಸಾಗಲೆಂದು

ಬಯಸುವುದು ಅಂದಾಗ ಮಾತ್ರ ಸಿದ್ಧಸೋಮನಾಥಲಿಂಗ ಒಲಿವನು. ದೇವರನ್ನು ಬರೀ ಪೂಜೆ ಮಾಡಿ ಒಲಿಸುತ್ತೇನೆ ಎನ್ನುವಷ್ಟು ಸುಲಭದ ಮಾತಲ್ಲ. ಬಸವಾದಿ ಶರಣರು ತಮ್ಮ ಇಷ್ಟಲಿಂಗ ಪೂಜೆಯ ಜೊತೆಗೆ ಕಾಯಕ ಮತ್ತು ದಾಸೋಹ ಮಾಡುತ್ತಿದ್ದರು. ಅದರಲ್ಲಿ ಪಡೆದ ಅನುಭವವ ಅನುಭವಿಸಿ, ಅನುಭಾವದೊಡನೆ ಆಚರಣೆಯಲ್ಲಿ ತಂದವರು.

ಸೃಷ್ಟಿಕರ್ತ ಪರಮಾತ್ಮನು ಈ ಮಾನವನು ವಾಸಿಸುವ ಭೂಲೋಕವು ಹಾಳಾಗಿ ಹೋಗಬಾರದೆಂದು ಬಸವಣ್ಣನವರನ್ನು ಕಳಿಸಿದನು. ಬಸವಣ್ಣನವರು ಬಂದು ಕಲ್ಯಾಣದ ಮಹಾಮನೆಯಲ್ಲಿ ಮಾನವಿಯತೆಯ ತಳಹದಿಯ ಮೇಲೆ ಸಮತೆಯ ಶರಣಸಂಕುಲವನ್ನು ಕಟ್ಟಿದರು.

> **ಮರ್ತ್ಯದ ಮಹಾಮನೆ ಹಾಳಾಗಿ ಹೋಗಬಾರದೆಂದು**
> **ಕರ್ತನಟ್ಟಿದನಯ್ಯಾ ಒಬ್ಬ ಶರಣನ ! ಆ**
> **ಶರಣ ಬಂದು ಕಲ್ಯಾಣವೆಂಬ ಶಿವಪುರವ ಕೈಲಾಸವ ಮಾಡಿ**
> **ರುದ್ರಗಣ ಪ್ರಮಥಗಣಂಗಳೆಲ್ಲರ ಹಿಡಿತಂದು**
> **ಅಮರಗಣಂಗಳೆಂದು ಹೆಸರಿಟ್ಟು ಕರೆದು,**
> **ಅಗಣಿತಗಣಂಗಳೆಲ್ಲರ ಹಿಡಿತಂದು,**
> **ಅಸಂಖ್ಯಾತರೆಂಬ ಹೆಸರಿಟ್ಟು ಕರೆದು,**
> **ಭಕ್ತಿಯ ಕುಳಸ್ಥಲವ ಶ್ರುತದೃಷ್ಟಪವಾಡದಿಂದ ಮರೆದು ತೋರಿ,**
> **ಜಗವರಿಯಲು ಶಿವಾಚಾರವ ಧ್ವಜವನೆತ್ತಿಸಿ**
> **ಮರ್ತ್ಯಲೋಕಕ್ಕೆ ಶಿವಲೋಕವೆರಡಕ್ಕೆ ನಿಚ್ಚಣಿಕೆಯಾದನು.**
> **ಆ ಶಿವಶರಣನ ಮನೆಯೊಳಗಿಪ್ಪ ಶಿವಗಣಂಗಳ ತಿಂಥಿಣಿಯ ಕಂಡು,**
> **ಎನ್ನ ಮನ ಉಬ್ಬಿಕೊಬ್ಬಿ ಓಲಾಡುತ್ತಿದ್ದೆನಯ್ಯಾ !**
> **ನಮ್ಮ ಗುಹೇಶ್ವರನ ಶರಣ ಸಂಗನಬಸವಣ್ಣನ**
> **ದಾಸೋಹದ ಘನವನೇನೆಂದೆನಬಹುದು ನೋಡಾ ಸಿದ್ಧರಾಮಯ್ಯಾ.**
> **–ಅಲ್ಲಮಪ್ರಭುದೇವರು**

ಅಲ್ಲಮಪ್ರಭುಗಳು ಬಸವಣ್ಣನವರ ಜೀವನದ ಗಂಭೀರ ಪುರುಷಾರ್ಥವನ್ನು ಕುರಿತು ಹೇಳುವುದರಲ್ಲಿ ಸತ್ಯ ತುಂಬಿ ತುಳುಕುತ್ತಿದೆ.

'ಕೋಟಿಗೊಬ್ಬ ಶರಣ' ಎಂಬಂತೆ ಆಯಾ ದೇಶ ಆಯಾ ಕಾಲ ಆಯಾ ಜನಾಂಗದಲ್ಲಿ ಗುಣಮಟ್ಟದ ಪರಿಸರದಲ್ಲಿ ಮಹನೀಯರು, ದಾರ್ಶನಿಕರು ಉದಯವಾಗದೆ ಹೋಗಿದ್ದರೆ ಮರ್ತ್ಯದ ಮನೆ ಹಾಳಾಗುತ್ತಿತ್ತು. ಬಸವಣ್ಣನವರು ಮರ್ತ್ಯದಲ್ಲಿ ಬಂದಿರುವ ಮಣಿಹವೇನು ? ಸ್ವಾರ್ಥದಲ್ಲಿ ಮುಳುಗಿದ ಲೋಕವನ್ನು ಅಲ್ಲಿಯೆ ಹಾಳಾಗಿ ಹೋಗಲು ಬಿಡದೆ ಮರ್ತ್ಯವನ್ನು ಅಮರ್ತ್ಯದತ್ತ ಎತ್ತುವುದೆ ಮಹಾತ್ಮರ ಧ್ಯೆಯೋದ್ಧೇಶವಾಗಿರುತ್ತದೆ. ಅವರು ಅವತರಿಸಿದ ದಿವ್ಯದ ಬೆಳಗಿನಿಂದಿಳಿದಿರುವ ಪ್ರೇಮ, ಅನುಭವ, ನೀತಿ ಧರ್ಮತತ್ತ್ವ ಸತ್ಯ ಅಹಿಂಸೆ ಸಹಾಯ ಸಹಕಾರ ಗುಣಶೀಲ ಆಚಾರ–ವಿಚಾರದ ಸ್ವಚ್ಛಂಧವಾದ ಬೀಜಗಳನ್ನು ಮರ್ತ್ಯದಲ್ಲಿ ಬಿತ್ತಿದರು.

ಬಸವಣ್ಣನವರು ಮರ್ತ್ಯಕ್ಕೆ ಬಂದು ಕಲ್ಯಾಣದಲ್ಲಿಯೆ ಕೈಲಾಸವನ್ನು ತಂದು ನೆಲೆಗೊಳಿಸಿದರು. ಮರ್ತ್ಯಕ್ಕೆ ಮಹವನ್ನೇ ತಂದ ಬಸವಣ್ಣ "ಮರ್ತ್ಯ ಲೋಕ ಮತ್ತು ಶಿವಲೋಕವೆರಡಕ್ಕೆ" ನಿಚ್ಚಣಿಕೆಯಾದರು. ಅನಾದಿಶರಣ ಸಂಗನ ಬಸವಣ್ಣ 'ಮರ್ತ್ಯಲೋಕದ ಮಹಾಮನೆ ಹಾಳಾಗಿ ಹೋಗಬಾರದೆಂದು' ಮರ್ತ್ಯಲೋಕದಿಂದ ಶಿವಲೋಕಕ್ಕಿಟ್ಟಿರುವ ನಿಚ್ಚಣಿಕೆಯಿದ್ದ ಕಲ್ಯಾಣದ ಮಹಾಮನೆಯ ಅಂಗಳದಲ್ಲಿ ಅಸಂಖ್ಯಾತ ಶರಣಗಣಂಗಳ ನೆಲೆಯಿಂದ ಮರ್ತ್ಯಲೋಕವೆಲ್ಲವೂ ಭಕ್ತಿಸಾಮ್ರಾಜ್ಯವಾಯಿತು. ಅಂತೆಯೆ ಅಮುಗಿದೇವಯ್ಯನವರಂಥ ಶರಣ ದುಂಬಿಗಳು ಎತ್ತಣ ಮಾಮರ ಎತ್ತಣ ಕೋಗಿಲೆ ಎಂಬಂತೆ ಜನಸಾಗರವಾಗಿ ಹರಿದು ಬಂದರು.

ಕಲ್ಯಾಣದಲ್ಲಿ ಕಟ್ಟಿದ ಮಹಾಮನೆಗೆ ನಾನಾ ಕಡೆಗಳಿಂದ ಬಂದವರು ವಿನಯದಿಂದ ನಿಜಲಿಂಗಪದದಲ್ಲಿ ನಿಂತರು. ಬಸವಣ್ಣನೆಂಬ ಶಿವಶರಣನ ಮಹಾಮನೆಯೊಳಗೆ ಶಿವಗಣಂಗಳ ತಿಂಥಿಣಿ, ಶರಣಸಂಕುಲವನ್ನು ಕಂಡು ಎನ್ನ ಮನ ಉಬ್ಬಿ ಕೊಬ್ಬಿ ಹರ್ಷದೊಳು ಓಲಾಡುತ್ತಿರ್ದೆನಯ್ಯಾ ಎನ್ನುತ್ತಾರೆ ಅಲ್ಲಮಪ್ರಭುಗಳು. ಗುಹೇಶ್ವರನ ಶರಣ ಸಂಗನ ಬಸವಣ್ಣನ ಕಾಯಕ ದಾಸೋಹದ ಮಹಾಮನೆ ಶಿವಯೋಗ ದೃಷ್ಟಿಯಿಂದ ನೋಡಬೇಕೆಂದು ಅವರು ನುಡಿದಿದ್ದಾರೆ. ಶರಣರ ಜೀವನದ ನಿಲುವಿನ ನಿಜಾರ್ಥವನ್ನು ಹೀಗೆ ಬಣ್ಣಿಸಿದ್ದಾರೆ.

ಬಸವತತ್ತ್ವ ಎಂದರೆ ಕಾಯಕತತ್ತ್ವ. ಪ್ರತಿಯೊಬ್ಬ ಶರಣರು ತಮ್ಮ ವಚನದಲ್ಲಿ ಕಾಯಕಪ್ರಸಾದ-ದಾಸೋಹದ ಮೌಲ್ಯದೊಂದಿಗೆ ಗುರು-ಲಿಂಗ-ಜಂಗಮದ ಮಹತ್ವವನ್ನು ಅತ್ಯಮೂಲ್ಯವಾದ ವಚನಗಳನ್ನು ರಚಿಸುವುದರ ಮೂಲಕ ತಿಳಿಸಿಕೊಟ್ಟಿದ್ದಾರೆ. ಗುರುಲಿಂಗ, ಶಿವಲಿಂಗ, ಜಂಗಮಲಿಂಗಗಳಿಂದ ಹೇಗೆ ಜ್ಞಾನದ ಉದಯವಾಯಿತು ಎಂದು ಅಮುಗಿದೇವಯ್ಯನವರು ನುಡಿದಿದ್ದಾರೆ.

ಗುರುಲಿಂಗ ಸಂಯೋಗವಾದಲ್ಲಿ ಶಿವಲಿಂಗದುದಯ.
ಶಿವಲಿಂಗ ಸಂಯೋಗವಾದಲ್ಲಿ ಜಂಗಮಲಿಂಗದುದಯ.
ಜಂಗಮಲಿಂಗ ಸಂಯೋಗವಾದಲ್ಲಿ ಪ್ರಸಾದದುದಯ.
[ಪ್ರಸಾದ ಸಂಯೋಗವಾದಲ್ಲಿ ಪ್ರಾಣದುದಯ]
ಪ್ರಾಣದುದಯವಾದಲ್ಲಿ ಜ್ಞಾನದುದಯ.
ಜ್ಞಾನಾನುಭಾವ ಸಂಯೋಗವಾದಲ್ಲಿ ಸುಜ್ಞಾನದುದಯ.
ಇಂತೀ ಗುರುವಿನ ಘನವ, ಲಿಂಗದ ನಿಜವ, ಜಂಗಮದ ಮಹಿಮೆಯ,
ಪ್ರಸಾದ ರುಚಿಯ, ಪ್ರಾಣನ ನೆಲೆಯ, ಸುಜ್ಞಾನದ ನಿಲವ,
ಮಹಾನುಭಾವದ ಸುಖವರಿದು ಮರದಲ್ಲಿ,
ಮಹಾಘನ ಸದ್ಗುರು ಸಿದ್ಧಸೋಮನಾಥನೆಂಬ ಲಿಂಗದಲ್ಲಿ
ಜ್ಞಾನಭರಿತವಾದಂದು ಸುಜ್ಞಾನ.

-ಅಮುಗಿದೇವಯ್ಯ

ಶರಣರು ಗುರುಲಿಂಗ, ಶಿವಲಿಂಗ, ಜಂಗಮಲಿಂಗ ಸಂಬಂಧದೊಳಗೆ ಇಷ್ಟಲಿಂಗ ಪೂಜೆಮಾಡುತ್ತ ಲಿಂಗದ ಕಳೆಯೆ ಏಕವಾಗಿ ಅಂತರಂಗದ ಜ್ಞಾನ ಬಹಿರಂಗದ ಕ್ರಿಯೆಯೊಡನೆ ಒಂದಾಗಿತ್ತು. ಇಷ್ಟಲಿಂಗದ ಕಳೆ ಪ್ರಾಣಕ್ಕೆ ವೇದಿಸಿ ಪ್ರಾಣಚೈತನ್ಯಕ್ಕೆ ಬೀಜದಲ್ಲಿ ಮೊಳಕೆಯೊಡೆದು ಪ್ರಾಣಲಿಂಗವಾಗಿ ಪ್ರಜ್ವಲಿಸಿತು. ಲಿಂಗದ ನೋಟ, ಪ್ರಾಣದ ಕೂಟ ಸಂಯೋಗದಲ್ಲಿ ಪ್ರಕಾಶಿಸುವ ಇಷ್ಟಲಿಂಗದ ಅಷ್ಟವಿಧಾರ್ಚನೆಯ ಕ್ರಿಯೆ ಅಂತರಂಗದ ಅರಿವಿನಲ್ಲಿ ನಾಟಿ, ಅರಿವೆಲ್ಲ ಜ್ಞಾನಲಿಂಗವಾಗಿ, ಜ್ಞಾನಲಿಂಗ ಹೊರಗೆ ಕಾಯದಲ್ಲಿ ಮೂಡಿ ತೋರಿದರೆ ಕ್ರಿಯಾಜ್ಞಾನಗಳ ಸಮರಸ ಸಂಬಂಧ ಆಚಾರಲಿಂಗವಾಗಿ ಪ್ರಸಾದ ರುಚಿಯ ಸುಜ್ಞಾನ ಸುಖದ ಅನುಭವವಾಗುವುದು.

ಶರಣನು ತನ್ನ ಸಾಕಾರದೇಹದಲ್ಲಿ ಸರ್ವನಾಮ ಸರ್ವರೂಪ ಸರ್ವಕ್ರಿಯೆ ಸರ್ವತತ್ತ್ವಗಳ ಸರ್ವಾಕಾರವನ್ನು ಹೊಂದಿದ ಯಾವ ಆಕಾರವಿಲ್ಲದೆ ನಿಂದಿರುವ ನಿರಾಕಾರಲಿಂಗವನ್ನೇ ತನ್ನೊಳಗೆ ಗರ್ಭೀಕರಿಸಿಕೊಂಡಿದ್ದಾನೆ. ಅಂಥ ಮಹಾಮಹಿಮರಿಗೆ ಯಾವ ಕರ್ಮಗಳಿಲ್ಲ. ನಿಜಲಿಂಗ ಉಂಡ ಶರಣನ ನಿಲವು ಆ ನಿಜಲಿಂಗವೇ ತಾನಾದ ಬಳಿಕ ಭಾವವೆಂಬ ಶಿವಜ್ಞಾನದಿಂದ ಮಂಗಲಮಯವಾದ ಅರಿವು ಲಿಂಗಕ್ಕರ್ಪಿತವಾಗಿ ಭ್ರಮೆಯೆಂಬುದಿಲ್ಲ.

ಕಾಯ ಲಿಂಗಕ್ಕರ್ಪಿತವಾದಡೆ ಕರ್ಮವಿಲ್ಲ.
ಜೀವ ಲಿಂಗಕ್ಕರ್ಪಿತವಾದಡೆ ಜನಿತವಿಲ್ಲ.
ಭಾವ ಲಿಂಗಕ್ಕರ್ಪಿತವಾದಡೆ ಭ್ರಮೆಯಿಲ್ಲ.
ಅರಿವು ಲಿಂಗಕ್ಕರ್ಪಿತವಾದ ಬಳಿಕ ಪ್ರಸಾದವ ಗ್ರಹಿಸಿದನಾಗಿ, ಕುರುಹಿಲ್ಲ,
ಮಾಯಾಪ್ರಪಂಚವನತಿಗಳೆದು ನಿಮಗರ್ಪಿಸಬಲ್ಲನಾಗಿ, ಆತನು ಶರಣನು
ಬೆಚ್ಚಂತೆ, ಬೆರಸಿ ಅಚೊತ್ತಿದಂತೆ, ಅಪ್ಪು ಒಳಕೊಂಡ ವಾರಿಕಲ್ಲಿನಂತೆ,
ಜ್ಯೋತಿಯುಂಡ ತೈಲದಂತೆ, ಜಲವುಂಡ ಮುತ್ತಿನಂತೆ,
ಬಯಲುಂಡ ಬೆಳಗಿನಂತೆ ಇರ್ದನಾಗಿ
ಮಹಾಘನ ಸದ್ಗುರು ಸಿದ್ಧಸೋಮನಾಥಾ
ನಿಮ್ಮ ಶರಣರ ಹೆಸರಡಗಿದ ಲಿಂಗೈಕ್ಯರೆಂದೆ.

–ಅಮುಗಿದೇವಯ್ಯ

ಬಸವಾದಿ ಶರಣರು ಸರ್ವಾಂಗ ಲಿಂಗಿಗಳಾಗಿದ್ದರು. ಕಾಯ ಜೀವ ಭಾವ ಮೊದಲಾದವುಗಳೆಲ್ಲಾ ಲಿಂಗಕ್ಕೆ ಅರ್ಪಿಸಿ ಮಾಯಾಪ್ರಪಂಚವನ್ನು ದಾಟಿ ಮರ್ತ್ಯಲೋಕವನ್ನು ಕರ್ತಾರನ ಕಮ್ಮಟವಾಗಿಸಿದರು. ಅವರು ಯಾವ ಭ್ರಮೆಗಳಿಲ್ಲದೆ ಬಯಲೊಳಗಿನ ಬೆಳಗಿನಂತೆ ಬದುಕಿದರು. ಜಲವನ್ನೆ ಉಂಡು ಆಗುವ ಮುತ್ತಿನಂತೆ, ಎಣ್ಣೆ ಹೀರುತ್ತಾ ಬೆಳಗುವ ಜ್ಯೋತಿಯಂತೆ, ಮಳೆ ಸುರಿಯುತ್ತಿದ್ದಾಗ ನೀರು ಗಟ್ಟಿಯಾಗಿ ವಾರಿಕಲ್ಲುಗಳಾಗಿ ಭೂಮಿಗೆ ಬಿದ್ದು ಅಲ್ಲಿಯೇ ನೀರಾಗಿ ಕರಗಿ ಬಯಲಾಗುವಂತೆ ಶರಣರು ಏನನ್ನೂ ಬಯಸದೆ ಲಿಂಗದೊಳು ಒಡಗೂಡಿ ಲಿಂಗವೆ ತಾನಾಗಿ ಮಹಾಘನ ಸದ್ಗುರು

ಸಿದ್ಧಸೋಮನಾಥ ದೇವನೇ ನಿಮ್ಮ ಶರಣರು ನಿಮ್ಮೊಳಗೆ ಒಂದಾದವರು ಎಂದು ಅಮುಗಯ್ಯ ಹೇಳುತ್ತಾರೆ.

ಕಲ್ಯಾಣದ ಅನುಭವ ಮಂಟಪವು ಅಮುಗಿದೇವಯ್ಯನವರಿಗೆ ಅನುಭಾವದ ನೆಲೆಯಾಯಿತು. ವಚನ ರಚನೆಯ ಮಹಾಮಂಟಪದಲ್ಲಿ ದೇವಯ್ಯ ಗಣ್ಯಮಾನ್ಯರಾದರು. ಲಿಂಗಾಂಗಸಾಮರಸ್ಯದ ನಿಲುವಿನ ಕಡೆಗೆ ಸಾಗಿದ್ದ ಅಮುಗಯ್ಯನವರು "ಸುಳುಹೆಂಬುದನರಿಯ, ಸೂಕ್ಷ್ಮವೆಂಬುದನರಿಯ, ಒಳಗೆಂಬುದನರಿಯ, ಹೊರಗೆಂಬುದನರಿಯ. ಇರ್ದುದು ಇರ್ದಂತೆ ಇರ್ದಿತ್ತು ಕಾಣಾ. ಸಿದ್ಧಸೋಮನಾಥನೆಂಬ ಲಿಂಗವು ಶಬ್ದಮುಗ್ಧವಾದುದನೇನೆಂಬೆನಯ್ಯಾ!" ಅಂತರಂಗಬಹಿರಂಗಗಳೆರಡರಲ್ಲಿಯೂ ಏಕೋಭಾವವಿದ್ದರೆ ಮಾತ್ರ ಅರಿವು ಅರಳಿ ಮಾರ್ಗತೋರಬಲ್ಲುದು. ಒಳಗೆ ಮತ್ತು ಹೊರಗೆ ಎಂಬ ಭೇದ-ಭಾವಗಳಿಲ್ಲದೆ ಇದ್ದದ್ದನ್ನು ಇದ್ದಂತೆ ಸ್ವೀಕರಿಸುವ ಮನೋಭಾವ ಪ್ರತಿಯೊಬ್ಬ ಶರಣರಲ್ಲಿಯೂ ಅಳವಟ್ಟಿತ್ತು. ಶರಣರು ಏಕೋಭಾವದಿಂದ ಲಿಂಗಾನುಸಂಧಾನ ಮಾಡುತ್ತಾ ಐಕ್ಯಸ್ಥಲದಲ್ಲಿ ಶಬ್ದಮುಗ್ಧರಾದರು. ಈ ವಚನದಲ್ಲಿ ಐಕ್ಯದ ಸುಳುಹನ್ನು ತಿಳಿಸುತ್ತಾರೆ.

ಆಕಾರವಿಲ್ಲದ ನಿರಾಕಾರ ನಿರವಯಲ ಸ್ವರೂಪದ ಕುರುಹು ಇಷ್ಟಲಿಂಗವನ್ನು ಪೂಜಿಸುವ ಶರಣರಲ್ಲಿ ಜ್ಞಾನಜ್ಯೋತಿಯ ಪ್ರಭೆ ಅರಳುತ್ತದೆ. ವಿಶ್ವಾಂತರಾಳದ ಹೃದಯವಾದ ತನ್ನ ಹೃದಯದಲ್ಲಿ ತೊಳಗಿ ಬೆಳಗುವ ಅಖಂಡ ತೇಜೋಮಯ ಚೈತನ್ಯದ ಸ್ವರೂಪವೆ ತಾನಾಗಿ ನಿಂದಂತೆ ಮಹಾಬೆಳಗಿನಲ್ಲಿ ಓಲಾಡುತ್ತಾನೆ. ಆಗ ಪರಾತ್ಪರ ಪರವಸ್ತುವಿನ ನಿರೂಪದ ನಿಲುಗಡೆಯಾಗಿ ನಿಜದ ನಿರಾಳದಲ್ಲಿ ಎರಡಳಿದು ಒಂದಾಗಿ ಇರುವನು.

ಸಾವಯನಲ್ಲ, ಸ್ವರೂಪ ಕುರುಹಿಡಿಯನಾಗಿ,
ನಿರವಯನಲ್ಲ, ನಿರೂಪ ಭಾವಿಸನಾಗಿ,
ದ್ವೈತಿಯಲ್ಲ, ಸೇವ್ಯಸೇವಕನೆಂಬ ಉಭಯವಳಿದುಳಿದನಾಗಿ,
ಅದ್ವೈತಿಯಲ್ಲ, 'ನಾಹಂ-ಕೋಹಂ-ಸೋಹಂ' ವೆಂಬ
ಭ್ರಮೆಯಳಿದುಳಿದನಾಗಿ,

ಇಂತೀ ಸಕಲಭ್ರಮೆಯಳಿದು ಮಹಾಘನದಲ್ಲಿ ನಿಷ್ಪತಿಯಾಗಿಪ್ಪ
ಸಿದ್ಧಸೋಮನಾಥಲಿಂಗಾ, ನಿಮ್ಮ ಶರಣ.

–ಅಮುಗಿದೇವಯ್ಯ

ಶಿವಕಳೆಂತುಳ್ಳ ಶರಣರು ದಾಸೋಹಂಭಾವದಿಂದ ದೇಹಗುಣಗಳಳಿದು ಲಿಂಗದೇಹಿಯಾಗಿ ಬಹಿರಂಗದ ಬಳಕೆಯಿಂದ ದೂರ ಉಳಿದರು. ದ್ವೈತ, ಅದ್ವೈತ, ನಾಹಂ, ಕೋಹಂ, ಸೋಹಂ ಎಂಬ ಸಕಲ ಭ್ರಮೆಯನ್ನು ಅಳಿಸಿ ಈ ಮಾಯಾಪ್ರಪಂಚವನ್ನು ಗೆದ್ದು ಮುಂದೆ ಸಾಗಿದರು. ಲಿಂಗೈಕ್ಯ ಎಂಬ ನಿಷ್ಪತ್ತಿಯಲ್ಲಿ ಶಬ್ದಮುಗ್ಧವಾಗಿ ನಿಶ್ಯಬ್ದವಾದ ಬಟ್ಟಬಯಲಲ್ಲಿ ಅಂಗ ಲಿಂಗಗಳ ಸಂಗವಾಗಿ ಸಾಮರಸ್ಯದ ನಿರಾಳ ನಿಲವನ್ನು ಪಡೆದರು.

ಸುಜ್ಞಾನ ವಿಕಾಸವಾಗಿ ಸದ್ಭಕ್ತಿ ಪುಷ್ಟವಾದರೆ ಲಿಂಗದ ಪರಿಮಳ, ಲಿಂಗಾನಂದದ ದಿವ್ಯ ಮಕರಂದ, ಅನಾದ್ಯನಂತವಾದ ಲಿಂಗದ ನಿತ್ಯ ಪರಿಪೂರ್ಣತೆಗಳು ಮರ್ತ್ಯದ ಮಹಾನಂದವನ್ನು ದಿವ್ಯತೆಯಿಂದ ಅಲಂಕಾರಗೊಳಿಸುತ್ತವೆ. ಅಂತೆಯೆ ಶಿವೋಹಂ, ಸೋಹಂ, ಅಹಂ ಬ್ರಹ್ಮಾಸ್ಮಿ ಎಂಬ ಅದ್ವೈತ ಜ್ಞಾನ ಸಿದ್ಧಿಯಾದರೂ ಅಲ್ಲಿಯೆ ವಿಶ್ರಮಿಸಿ ಕುಳ್ಳಿರಬಾರದು. ಅದು ಶರಣತತ್ತ್ವಕ್ಕೆ ದೂರ. ಸೋಹಂ ಎಂಬುದ ಕೇಳಿ ದಾಸೋಹವ ಮಾಡದಿದ್ದರೆ ಶರಣರು ನಿರಾಕರಿಸುತ್ತಾರೆ. ಭಕ್ತನಿಗೆ ಸೋಹಂ ಭಾವವೆ ಪ್ರಾಣ. ದಾಸೋಹಂ ಭಾವವೆ ದೇಹ, ಚೈತನ್ಯಮಯವಾದ ಪ್ರಾಣ ದೇಹದ ಮುಖವಾಗಿ ವರ್ತಿಸುತ್ತಿರುವಂತೆ ಭಕ್ತನ ನಿಜದರಿವು ಅರಿವಿನಾಚರಣೆಯಾಗಿ ಶರಣನ ಸರ್ವಾಂಗದಲ್ಲಿ ಸೂಸುತ್ತದೆ.

ಅಲ್ಲಮಪ್ರಭುದೇವರು ಸಿದ್ಧರಾಮಯ್ಯನವರನ್ನು ಕಲ್ಯಾಣಕ್ಕೆ ಕರೆದುಕೊಂಡು ಬಂದರು. ಕಲ್ಯಾಣಕ್ಕೆ ಬಂದು ಅನಭಾವ ಗೋಷ್ಠಿಯಲ್ಲಿ ಮನಮಗ್ನರಾಗಿ ಆನಂದಯೋಗದಲ್ಲಿ ಇರುವ ಶಿವಯೋಗಿ ಸಿದ್ಧರಾಮರ ವಚನಗಳಲ್ಲಿ ಅಮುಗಿದೇವಯ್ಯನವರ ಬಗ್ಗೆ ಪ್ರಸ್ತಾಪವಾಗಿರುವುದನ್ನು ನೋಡುತ್ತೇವೆ.

ಅಯ್ಯಾ, ನಿಮ್ಮ ಸತ್ ಕೃಪೆ !
ಎನ್ನ ಸುಕೃತಾಂಗಿಯ ಮಾಡಿ ಮರ್ತ್ಯಕ್ಕೆ ತಂದಿರಯ್ಯಾ,

ಅಯ್ಯಾ, ನಿಮ್ಮ ಕೃಪೆಯಿಂದ
ನಿಷ್ಠಾಮಹೇಶ್ವರನೆನಿಪ ಅಮುಗಿದೇವಯ್ಯಗಳಿಂದ
ಪ್ರಭುದೇವರೆಂಬ ಅನಾದಿ ಜಂಗಮವ ಕಂಡೆನಯ್ಯಾ'
ಅಯ್ಯಾ, ನಿಮ್ಮ ಪ್ರಭುದೇವರೆಂಬ ಅನಾದಿ ಜಂಗಮದಿಂದ
ಪರಮ ಗುರುವಪ್ಪ ಬಸವೇಶ್ವರನ ಕಂಡೆನಯ್ಯಾ.
ಆ ಬಸವಣ್ಣನಿಂದ ಅಸಂಖ್ಯಾತ ಪ್ರಮಥಗಣಂಗಳ ಕಂಡೆನಯ್ಯಾ.
ಆ ಗಣಂಗಳ ಕೃಪೆಯಿಂದ ಚನ್ನಬಸವಣ್ಣನ ಪಡೆದು
ನಿಮ್ಮನಂಗದ ಮೇಲೆ ಸಾಹಿತ್ಯವ ಮಾಡಿಕೊಂಡೆನಯ್ಯಾ.
ನಿಮ್ಮ ಸಾಹಿತ್ಯದ ಪ್ರಸನ್ನಮೂರ್ತಿ ಎನ್ನ ಕಣ್ಣಮುಂದೆ ಪ್ರತ್ಯಕ್ಷವಾಗಿಪ್ಪ
ಮರುಳಶಂಕರದೇವರ ಶ್ರೀ ಪಾದವ ಕಂಡು
ನಾನು ನಿಶ್ಚಯ ಕೃತಾರ್ಥನಾದೆನಯ್ಯಾ,
ಕಪಿಲಸಿದ್ಧಮಲ್ಲಿನಾಥ ಪ್ರಭುವೇ, ನಿಮ್ಮ ಧರ್ಮ.

–ಸಿದ್ಧರಾಮೇಶ್ವರ

ಸಿದ್ಧರಾಮೇಶ್ವರರು ಅಯ್ಯಾ ನಿಮ್ಮ ದಯೆದಿಂದ ಈ ಭೂಮಿಗೆ ಬಂದೆ. ನಿಷ್ಠಾಮಹೇಶ್ವರರಾದ ಅಮುಗಿದೇವಯ್ಯಗಳ ಪ್ರಭೆಯಿಂದ ಅನಾದಿ ಶರಣ ಪ್ರಭುದೇವರನ್ನು ಕಂಡೆ. ಆ ಪ್ರಭುವಿನ ಕೃಪೆಯಿಂದ ಪರಮ ಯೋಗಿಶ್ವರರಾದ ಗುರು ಬಸವಣ್ಣನವರನ್ನು ಕಾಣುವ ಭಾಗ್ಯ ದೊರೆಯಿತು. ಬಸವಣ್ಣನವರ ಮಹಾಮನೆಯಲ್ಲಿ ಅಸಂಖ್ಯಾತ ಪ್ರಮಥಗಣಂಗಳನ್ನು ಕಂಡೆನಯ್ಯಾ. ಚಿನ್ಮಯ ಜ್ಞಾನಿ ಚನ್ನಬಸವಣ್ಣನವರಿಂದ ಎನ್ನ ಅಂಗದ ಮೇಲೆ ಲಿಂಗ ಧರಿಸಿಕೊಂಡು ಇಷ್ಟಲಿಂಗದ ಒಳಗಿನ ಸೂಕ್ಷ್ಮ ಭೇದವನ್ನು ಅರಿತುಕೊಂಡೆನು. ನಿಮ್ಮ ಜ್ಞಾನವನ್ನು ತುಂಬಿಕೊಂಡು ಎನ್ನ ಕಣ್ಣಮುಂದೆ ಪ್ರತ್ಯಕ್ಷವಾಗಿ ಸುಳಿದಾಡುವ ಮರುಳಶಂಕರದೇವರನ್ನು ಕಂಡು ಧನ್ಯನಾದೆ. ಕಪಿಲಸಿದ್ಧಮಲ್ಲಿನಾಥ ಪ್ರಭುವೆ ನಿಮ್ಮ ಕರುಣಾ ಪ್ರಸಾದದಿಂದ ನನ್ನ ಜೀವನ ಪಾವನವಾಯಿತು.

ಅಂಗದ ಮೇಲೆ ಲಿಂಗ ಸಾಹಿತ್ಯ ಮಾಡಿಕೊಂಡ ಬಳಿಕ ಶಿವಯೋಗಿ ಸಿದ್ಧರಾಮರು ಅಮುಗಿದೇವಯ್ಯನವರಿಗೆ ಹೇಳುತ್ತಾರೆ.

ಅಂಗ ಲಿಂಗ ಒಂದೆಂದ ಬಳಿಕ ಅಂಗ ಕೆಟ್ಟ ಲಿಂಗ ಉಳಿಯಿತ್ತು, ನೋಡಾ.
ಅಂಗ ನಿರ್ವಯಲಾದಲ್ಲಿ ಲಿಂಗ ಭವಿಯಾದುದು ನೋಡಾ.
ಅಂಗ ಲಿಂಗ ನಿರ್ವಯಲಲ್ಲಡಗಿಸಬಲ್ಲಡೆ, ಭಕ್ತನೆಂಬೆ ಮಹೇಶವರನೆಂಬೆ,
ಕಪಿಲಸಿದ್ಧಮಲ್ಲಿಕಾರ್ಜುನನವನೆ ಎಂಬೆ ನೋಡಾ, ಅಮುಗಿದೇವಾ,
–ಸಿದ್ಧರಾಮೇಶ್ವರ

ಲಿಂಗಸಂಸ್ಕಾರದಿಂದ ಅಂಗದ ಗುಣಗಳು ಕಳೆದು ಲಿಂಗಮಯ ವಾಯಿತು. ಎನ್ನ ಸುಜ್ಞಾನ ಕಾಯದ ಮಸ್ತಕದ ಮೇಲೆ ಹಸ್ತವನಿರಿಸಿ, ಮನ ಭಾವ ಕರಣೇಂದ್ರಿಯಂಗಳಿಂದೆ ಸ್ವರೂಪೀಕರಿಸಿ, ದೃಷ್ಟಿಗೆ ದೃಷ್ಟಿ ತೋರಿದರು. ಎನ್ನ ಅಂಗೈಯಲ್ಲಿನ ಲಿಂಗವ ಕೊಟ್ಟ ಆ ಪರಶಿವನೆ ಗುರು ರೂಪಾಗಿ ಹೊರಗೊಳಗೆ ಬೋಧಿಸಿದ ಗುರುಮೂರ್ತಿ ಬಹಿರಂಗಕ್ಕೆ ಚನ್ನಬಸವಣ್ಣ ಎನ್ನ ಅಂತರಂಗದ ಪರಶಿವ ಗುರುಮೂರ್ತಿಯಾದವರು, ಅಂಗ ಲಿಂಗ ಒಂದಾಗಿ 'ಮಾಡುವ ಮಾಟದಲ್ಲಿ ತಾನಿಲ್ಲ' ದಂತೆ ಸಹಜ ಅನುಭವವಿರುವಂತೆ 'ನೋಟ ಕೋಟ' ದಲ್ಲಿ ತಾನಿಲ್ಲದೆ ನಿಶ್ಚಿಂತ ನಿರ್ವಯಲಲ್ಲಿ ಅಡಗಿದರೆ ಭಕ್ತನೆಂಬೆ, ಮಹೇಶ್ವರನೆಂಬೆ ಅಮುಗಿದೇವಾ ಎಂದು ಸಿದ್ಧರಾಮೇಶ್ವರರು ಹೇಳುತ್ತಾರೆ.

ಕಲ್ಯಾಣಮೂರುತಿ ಬಸವಣ್ಣನವರು ಅಭೇದ್ಯವಾದ ಆದಿ ಅನಾದಿಯನ್ನು ಭೇದಿಸಿ ಅಪ್ರಮಾಣದ ಬೆಳಗನ್ನು ಸಾಧಿಸಿಕೊಟ್ಟರು. ಕಂಗಳಿಗೆ ಲಿಂಗದ ಬೆಳಗನ್ನು ತೋರಿ, ಪ್ರಾಣದ ಚೈತನ್ಯ ಗುಹೆಯ ಬಾಗಿಲ ತೆರೆದು ಅದೇ ಲಿಂಗ ಪ್ರಜ್ವಲಿಸುವ ಪ್ರಾಣವನ್ನು ಪ್ರಾಣಕ್ಕೆ ಕೊಟ್ಟು ಭಾವದ ಕೀಲಿ ತೆಗೆದರು. ತನ್ನೊಳಗಿನ ನಿಜ ಸಾಮರ್ಥ್ಯವನ್ನು ಅರಿಯಿಸಿದರು. ಕಲ್ಪಿತದ ಮೂಲವನ್ನು ನಿರ್ಮೂಲ ಮಾಡಿದರು. ನಿಜಸುಖ, ನಿಜಜ್ಞಾನ ನಿಜಭಕ್ತಿಯನ್ನು ಅಳವಡಿಸಿಕೊಟ್ಟ ಸಂಗಯ್ಯನ ಗುರು ಬಸವಣ್ಣ 'ಬಂದ ಮಣಿಹ' ಶಿವಯೋಗ ಬೆಳವಿಗೆ, ಶಿವಭಕ್ತಿ ಶಿವಾಚಾರದ ಬೆಳವಿಗೆ ಪೂರೈಸಿತ್ತೆಂದು, ದೆಸೆದೆಸೆಯೆಲ್ಲಾ ಲಿಂಗದಿಂದ ತುಂಬಿ,' ಲಿಂಗದಲ್ಲಿ ನೆನೆದು ಲಿಂಗಮಯವಾಗಿ ಮಾಡಿದರು.

ಅಮುಗಿದೇವಯ್ಯ ಮತ್ತು ಅಮುಗಿರಾಯಮ್ಮ ದಂಪತಿ ಕಲ್ಯಾಣದಲ್ಲಿದ್ದು ಬಸವಣ್ಣನವರ ಮಹಾಮಣಿಹದಲ್ಲಿ ಪಾಲ್ಗೊಂಡರು. ನೇಯ್ಗೆಯ

ಕಾಯಕವನ್ನು ಅವಲಂಬಿಸಿದ್ದ ದೇವಯ್ಯ ದಂಪತಿ ಸೋಲಾಪುರದಿಂದ ಕಲ್ಯಾಣಕ್ಕೆ ಬಂದು ತಮ್ಮ ಕಾಯಕವನ್ನು ಮುಂದುವರಿಸಿಕೊಂಡು ಬಂದವರು. ಸುಗಮವಾಗಿ ಸಾಗಿದ್ದ ಶರಣರ ಬಾಳ ನೌಕೆ ಬಿರುಗಾಳಿಗೆ ಸಿಲುಕಿತು. ಕಲ್ಯಾಣದಲ್ಲಿ ಕೋಲಾಹಲ ಪ್ರಾರಂಭವಾಯಿತು. ಹರಳಯ್ಯ ಮಧುವರಸರ ಕಗ್ಗೊಲೆ, ಬಿಜ್ಜಳನ ವಧೆ, ತದನಂತರ ಕಂಡ ಕಂಡಲ್ಲಿ ಶರಣರ ಹತ್ಯಾಕಾಂಡ ನಡೆಯಿತು.

"ಮಂಟಪದ ಹೆಜ್ಜೆನ ಗಂಟೇರು ಕೆಡಸಿದರೆ
ಕುಟಿತವೆ ಜೇನ ನೊಣಗಳಿಗೆ । ಹುಟ್ಟಿಡಲು
ಬಂಟ ಶರಣರಿಗೆ ಕಂಟಕವೆ"

ಜೇನು ಕಟ್ಟಿರುವ ಗೂಡನ್ನು ಕೆಡಿಸಿಬಿಟ್ಟರೆ ಮತ್ತೆ ಹುಟ್ಟಿಡಲು ಜೇನು ನೊಣಗಳಿಗೇನು ಕಷ್ಟವೆ? ಹಾಗೆಯೇ ಧೀರ ವೀರರಾಗಿರುವಂತಹ ಶರಣರಿಗೆ ಒಂದೆಡೆ ಇಲ್ಲದಿದ್ದರೆ ಇನ್ನೊಂದೆಡೆಗೆ ಸಾಗುವರು. ಅವರು ಕಷ್ಟಗಳನ್ನು ಎದುರಿಸುವ ಕಲಿಗಳಾಗಿದ್ದರು. ಜಂಗಮ ರೂಪಿಗಳಾಗಿದ್ದರು. ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ. ಶರಣರು ಕಲ್ಯಾಣ ಬಿಟ್ಟು ತಮಗೆ ತೋಚಿದ ಕಡೆಗೆ ಹೊರಟರು. ಅಮುಗಿದೇವಯ್ಯ ಪುಳಜೆಯ ಕಡೆಗೆ ಮುಖಮಾಡಿದರು. ವಚನ ರಕ್ಷಣೆಯ ಹೊಣೆ ಹೊತ್ತ ಶರಣರು ಉಳುವಿಯ ಕಡೆಗೆ ಹೊರಟರು.

■■

ಕಲ್ಯಾಣದಿಂದ ಪುಳಜೆಯೆಡೆಗೆ

ಅಮುಗಿದೇವಯ್ಯ ಮತ್ತು ರಾಯಮ್ಮನವರು ಕಲ್ಯಾಣದಿಂದ ತಮ್ಮ ಇಷ್ಟದೇವತೆಯಾದ ಸಿದ್ಧಸೋಮನಾಥನಿರುವ ಪುಳಜೆಯೆಡೆಗೆ ಹೊರಟರು. "ಸೋಮನಾಥನ ನೆನಸಿ ಸೀಮೆ ಬಿಟ್ಟನು ಅಮುಗ, ಸ್ವಾಮಿ ನಿನ್ನಡಿಗೆ ನಾ ಬರುವೆ । ಅನುನೀಡು, ನೇಮ ನಿನ್ನೆಡೆಯು ಕಾಯಕವು". ಹೀಗೆ ಅವರು ತಮ್ಮ ಇಷ್ಟದೇವ ಸೋಮನಾಥನನ್ನು ನೆನೆಯುತ್ತಾ ಪುಳಜೆಗೆ ತಲುಪಿದರು.

"ಸಿದ್ಧ ಸೋಮೇಶನಿಗೆ ಇದ್ದೂರು ಮಣಿಮಣಿದು
ಸುದ್ದಿ ಅಮುಗಯ್ಯ ಶರಣೆಂದು । ಹಬ್ಬುತಲಿ
ಬಿದ್ದು ಜನಬಂತು ನೋಡುದಕೆ"

ಅಮುಗಿದೇವಯ್ಯ ಕಲ್ಯಾಣದಿಂದ ಪುಳಜೆಗೆ ಬಂದಿರುವ ಸುದ್ದಿ ಕೇಳಿ ಇಡೀ ಊರಿನ ಜನರೆಲ್ಲರೂ ಶರಣೆಂದು ಅವರನ್ನು ಸ್ವಾಗತಿಸಿದರು.

ಪಂಡರಾಪುರಕ್ಕೆ ಸಮೀಪದಲ್ಲಿರುವ ಪುಳಜ ಅಥವಾ ಪೂರ್ಣಜಾ (ಈಗ ಹೂಳಜ ಎಂದಾಗಿದೆ) ಎಂಬ ಗ್ರಾಮದಲ್ಲಿ ಲಿಂಗೇಶ್ವರ ದೇವಾಲಯವಿದೆ. ಭೀಮಾತೀರದ ಪುಳಜ ಗ್ರಾಮದಲ್ಲಿರುವ ದೇವಾಲಯವು ಆ ಕಾಲದಲ್ಲಿ ಅತ್ಯಂತ ಪ್ರಸಿದ್ಧವಾಗಿತ್ತು. ಆಗಿನ ಕಾಲಕ್ಕೆ ಕನ್ನಡದ ನೆಲೆವೀಡಾಗಿದ್ದ ಈ ಊರಿನ ಆರಾಧ್ಯದೇವರು ಸೋಮನಾಥಲಿಂಗ, ಪುಳಜ ಗ್ರಾಮವು ವಿಜಾಪುರ ಪಟ್ಟಣದಿಂದ ೪೫ ಕಿ. ಮೀ.ಮತ್ತು ಸೋಲಾಪುರದ ಪಶ್ಚಿಮಕ್ಕೆ ೨೫ ಕಿ. ಮೀ. ಗಳ ದೂರದಲ್ಲಿ ಇದೆ.

ಅಮುಗಿದೇವಯ್ಯನವರು ಪುಳಜದಲ್ಲಿ ಉಳಿದುಕೊಂಡು ತಮ್ಮ ಇಷ್ಟಲಿಂಗ ನಿಷ್ಠೆಯನ್ನು ಮುಂದುವರಿಸಿಕೊಂಡು ವಾಸಿಸುತ್ತಾರೆ. "ಊರರಿತು ಮರುದಿನವೇ ತೂರಿತುಂಬಿತು ಮಾಳ, ಸಾರಿದರು ಅಮುಗ ಶಿವಭಕ್ತಿ । ಕಣಿಯೆಂದು, ತೋರಿ ಶುಭಚಿಹ್ನ ಬೀಡಿಟ್ಟು." ಅಮುಗಯ್ಯನವರು ಶರಣರ ತತ್ವಗಳನ್ನು ಶಿವಾನುಭವದ ಮೂಲಕ ತಿಳಿಸುತ್ತಿದ್ದರು. ಈ ಸುದ್ದಿ ಊರೆಲ್ಲಾ ಹರಡಿ ಬಯಲು ತುಂಬೆಲ್ಲಾ ಜನರು ಬಂದು ಶರಣರ ತತ್ತ್ವಗಳನ್ನು ಆಲಿಸುತ್ತಿದ್ದರು.

ಶಿವಕೂಟ ಕೂಡಿಸುತ ಶಿವಗೋಷ್ಠಿ ನಡೆಸಿದನು
ಶಿವಶರಣ ಅಮುಗ ಗುರುವೆಂದು । ಜನಬರಲು
ಶಿವಮಂತ್ರ ಊದಿ ನಿತ್ಯದಲಿ

ರಾಶಿ ಜನರನ್ನು ಒಂದೆಡೆ ಸೇರಿಸಿ ಮಂಗಲವಾದ ಶಿವಮಂತ್ರವನ್ನು ನೀಡುವ ದೇವಯ್ಯನವರು ತಮ್ಮ ಲಿಂಗನಿಷ್ಠೆ ಮತ್ತು ಆತ್ಮಜ್ಞಾನದಿಂದ ಸುತ್ತಮುತ್ತೆಲ್ಲಾ ಅಮುಗಯ್ಯನವರ ಕೀರ್ತಿ ಪಸರಿಸಿತು.

ಮಹಾಶಿವಶರಣನಾದ ಅಮುಗಿದೇವಯ್ಯನವರ ಕೀರ್ತಿಯನ್ನು ಕೇಳಿದ ತರ್ದವಾಡಿಯ ರಾಜನಿಗೆ ಅವರನ್ನು ಕಾಣುವ ಆಸೆಯಾಯಿತು. "ತರದೆವಾಡಿಯ ರಾಯ ಹುರಿಯಾಳು ಜೈತುಗಿಯ, ಹಿರಿಮಗನು ಶೂರ

ಸಿಂಘಣನು । ಕೇಳಿದನು, ಶರಣ ಅಮುಗಯ್ಯ ಗುರುವೆಂದು". ಶರಣ ಅಮುಗಯ್ಯರನ್ನು ನೋಡುವ ಹಂಬಲದಿಂದ ತನ್ನ ದಂಡಾಧಿಕಾರಿಗಳ ಸಮೇತನಾಗಿ ಶೂರ ರಾಜನಾದ ಸಿಂಘಣನು ಬರುತ್ತಾನೆ.

"ಕೇಳಿ ಕಾಣಲು ಬಯಸಿ ಹೂಳಜೆಗೆ ನಾಳೆನದೆ
ಪಾಳೆಯೊಡಗೂಡಿ ಮುಟ್ಟಿದನು । ಕೈಮುಗಿದ
ತಾಳಿ ಮನದೊಳಗೆ ಗುರುವೆಂದು"

ದೇವಗಿರಿಯ ಯಾದವರ ಮಗ ಸಿಂಘಣನು ಮಹತ್ವಾಕಾಂಕ್ಷಿ ಮತ್ತು ತುಂಬಾ ಆತ್ಮವಿಶ್ವಾಸ, ಶೌರ್ಯಯುಳ್ಳ ದೊರೆಯಾಗಿದ್ದನು. ಇಡೀ ಉತ್ತರ ಕರ್ನಾಟಕವನ್ನು ತನ್ನ ಅಧಿನದಲ್ಲಿ ತೆಗೆದುಕೊಂಡಿದ್ದನು. ಪುಳಜೆಯಲ್ಲಿ ಅಮುಗಯ್ಯನ ಲಿಂಗನಿಷ್ಠೆ ಮತ್ತು ದಾಸೋಹವನ್ನು ಕಂಡು ಹರ್ಷಗೊಂಡನು. ಶಿವಮಂತ್ರ ಸಿಂಘಣಗೆ ಶಿವಶರಣನೂದಿದನು, ಶಿವನೆಂದು ದಂಡು ಭಜಿಸುತಲಿ

ಬಂದವರು, ಶೀವಮತಕೆ ಮೆಚ್ಚಿ ಕೈಮುಗಿದು. ಅಮುಗಿದೇವಯ್ಯನವರು ದೊರೆ ಸಿಂಘಣನಿಗೆ ಶಿವತತ್ತ್ವವನ್ನು ಬೋಧಿಸಿದರು. ಶಿವಮಂತ್ರೋಪದೇಶ ನೀಡಿದರು. ಸಿಂಘಣನು ಸಂತೋಷಪಟ್ಟು ಶಿರಬಾಗಿ ಕೈಮುಗಿದು ಅಮುಗಿದೇವಯ್ಯನವರನ್ನು ಗುರುವಾಗಿ ಸ್ವೀಕರಿಸಿದನು. ಅವರ ಭಕ್ತಿ ನಿಷ್ಠೆಯ ಕಾಯಕಕ್ಕೆ ಹೆಚ್ಚಿನ ಅನುಕೂಲ ಆಗಲಿ ಎಂಬ ಕಾರಣಕ್ಕಾಗಿ 'ಇಥೆ' ಎಂಬ ಗ್ರಾಮವನ್ನೇ ಉಂಬಳಿಯಾಗಿ ಕೊಟ್ಟನು.

"ಶುದ್ಧೇಕ ದಶಮಾಘ ಸಿದ್ಧಾರ್ಥಿ ವರುಷದೊಳು
ಸಿದ್ಧಸೋಮೇಶ ಭಕ್ತನಿಗೆ । ಸಿಂಘಣನು
ಇದ್ದೂರ ಗಡಿಗಿಥೆ ವತನಿತ್ತ"

ಸಿಂಘಣರಾಜನು ತರ್ದವಾಡಿ (ಈಗಿನ ವಿಜಯಪುರ ಜಿಲ್ಲೆಯ ಮೇಲ್ಬಾಗ) ಯನ್ನು ಆಳುತ್ತಿದ್ದನು. ಹೂಳಜೆಯು ತರ್ದವಾಡಿಯಲ್ಲಿದೆ. ಇದು ಹೂಳಜೆಯ ಶಾಸನದಿಂದ ತಿಳಿದು ಬರುವುದು. ಸಿಂಘಣನು ಲಿಂಗಾಗಿಯಾದನೆಂಬ ಮಾತು ಶಾಸನದಲ್ಲಿ ಸ್ಪಷ್ಟವಿಲ್ಲದಿದ್ದರೂ 'ಸರ್ವನಮಶ್ಯವಾಗಿ' ಎಂದು ಬರುವುದರಿಂದ ಸಿಂಘಣನು ಅಮುಗಿದೇವರ

ಭಕ್ತನಾಗಿ ಲಿಂಗದೀಕ್ಷೆ ಪಡೆದುಕೊಂಡು, ಅವರನ್ನು ಗುರುವೆಂದು ಒಪ್ಪಿಕೊಂಡು ಸಂತುಷ್ಟನಾಗಿ ಇಥ್ಥೆಯೆಂಬ ಗ್ರಾಮವನ್ನು ಧಾರೆಯೆರೆದು ಕೊಟ್ಟನು. ಸಿಂಘಣನು ಅಮುಗಿದೇವಯ್ಯರಿಗೆ ಅಭಿಮಾನದಿಂದ ಮಾನ್ಯವಾಗಿ ಕೊಟ್ಟಿದ್ದ ಆ ಗ್ರಾಮವನ್ನು ಈಗ 'ಇಟ' ಎಂದು ಕರೆಯುತ್ತಾರೆ. ಸಿಂಘಣನ ಗುರುಭಕ್ತಿ ಲಿಂಗವಂತರು ಕೇಳಿ, ಜಂಗು ಕಟಗೊಂಡು ಹಾಡಿದರು । ಹೊಸಮತವು, ನುಂಗಿ ನಾಡನ್ನು ನೀರ್ಕುಡಿದು. ದೊರೆ ಸಿಂಘಣನು ಶಿಷ್ಯನಾದ ಮೇಲೆ ಜಂಗಮರು ಕಾಲಿಗೆ ಗೆಜ್ಜೆನಾದದ ಶಬ್ದದಂತೆ ಹಾಡುತ್ತಾ ಅಮುಗಿದೇವಯ್ಯನವರ ಕೀರ್ತಿ ಬಾನೆತ್ತರಕ್ಕೆ ಹರಡಿಸಿದರು.

ಸಿಂಘಣ ರಾಜನಲ್ಲದೇ ಆತನ ಸೈನ್ಯಾಧಿಕಾರಿಗಳು ಕೂಡ ಪ್ರಭಾವಿತರಾಗಿದ್ದರು. ಸೋಯಿದೇವನ ಕೂಡ ಜೋಯಿದೇವನು ಕೂಡಿ, ಕಾಯಕದ ಅಮುಗ ಗುರುವೆಂದು । ಊಳಿಗಕ್ಕೆ, ದಾಯಮಾನೆಂದು ವತನಿತ್ತ. ಸೋಯಿದೇವ, ರವಿಯದೇವ, ಜೋಯಿದೇವ, ಸಾಹಿಣಿಕುಮಾರ, ಗಂಗಿದೇವ, ಬಿಜ್ಜನಾಣ, ಸಂಕಮದೇವ ಮುಂತಾದ ಪ್ರಮುಖ ದಂಡನಾಯಕರು ಅಮುಗಯ್ಯನವರನ್ನು ಗುರುವೆಂದು ಸ್ವೀಕರಿಸಿದರು. ದೇವಯ್ಯನವರ ಕಾಯಕದ ನೆರವಿಗಾಗಿ – ಪ್ರೀತಿಯಿಂದ ವತನ ಹಾಕಿ ಕೊಟ್ಟರೆಂದು ಬರುತ್ತದೆ.

ಪ್ರತಾಪಚಕ್ರವರ್ತಿ ಶ್ರೀ ಸಿಂಘಣ ದೇವರಸರು ಸರ್ವ ಸಿದ್ಧಾರ್ತಿ ಸಂವತ್ಸರದ ಮಾಘ ಶುದ್ಧ – ೧೧ ಸೋಮವಾರ ವ್ಯತಿಪಾತದಂದು ಪೂರ್ಣಜೆಗೆ ಬಂದಲ್ಲಿ ದೇವಾರ್ಚನೆಯ ಸಮಯದಲು ಶ್ರೀ ಸ್ವಯಂಭು ಸಿದ್ಧಸೋಮನಾಥ ದೇವರ್ಗೆಂದಾಯಿಥೆಯವನು ಸರ್ವನಮಶ್ಯವಾಗಿ ಅಮುಗಿದೇವರಸರ್ಗೆ ಆಕರ ಪರಿಹಾರವಾಗಿ ಧಾರಪೂರ್ವಕಂ ಮಾಡಿಕೊಟ್ಟರು.

ಅಷ್ಟೇ ಅಲ್ಲದೆ "ದೀಪಮಾನೆಯ ಕೊಟ್ಟ ಧೂಪಮಾನೆಯ ಕೊಟ್ಟ, ಸೋಪಾನ ಕಟ್ಟಿ ಭೀಮೆಯೊಳು । ಇಳಿಯುದಕೆ, ಸೋಪಾನಮಾನೆ ವತನಿತ್ತ". ಜನಪದದಲ್ಲಿ ಅನೇಕ ಮಠ ಮೊದಲಾದವುಗಳಿಗೆ ಈಗಲೂ 'ದೀಪಮಾನೆ,'

'ಧೂಪಮಾನೆ,' ಗಳು ನಡೆಯುತ್ತ ಬಂದಿವೆ. ಹಾಗೆ ಸಿಂಘಣನು ಕೊಟ್ಟ ಈ ದೇವಸ್ಥಾನಕ್ಕೆ ದೀಪಮಾನೆ, ಧೂಪಮಾನೆ, ಗುಡಿಯಿಂದ ಭೀಮೆಯೊಳು ಇಳಿಯಲಿಕ್ಕೆ ಸೋಪಾನ ಕಟ್ಟಿಸಿ ಅದರ ವ್ಯವಸ್ಥೆಗಾಗಿ ಕೊಟ್ಟ ಸೋಪಾನ ಮಾನೆಗಳು ಈಗಲೂ ದೇವಸ್ಥಾನಕ್ಕೆ ನಡೆಯುವುವು. ಅಮುಗಯ್ಯನ ಭಕ್ತಮಂಡಳಿಯನ್ನು ನೋಡಿ ಅವರ ಉಪಜೀವನಕ್ಕೆಂದು ಹಾಕಿಕೊಟ್ಟ 'ದಾಯಿಮಾನೆ' ಕುರಿತು ಬರೆದ ಜನಪದ ಕವಿಯು ಇದು ಸಂಭವಿಸಿದ ಶುಭದಿವಸವನ್ನೂ ತಿಳಿಸಿದ್ದಾನೆ. ಈ ಘಟನೆ ಶಿಲಾಶಾಸನದಲ್ಲಿಯೂ ದಾಖಲಾಗಿದೆ.

ನಿಷ್ಠಾವಂತ ಅಮುಗಿದೇಯ್ಯನವರು ತಮ್ಮ ಅನುಭವದಿಂದ ಅನುಭಾವಿಯಾಗಿ ಶಿವಪೂಜೆ, ಶಿವಮಂತ್ರ ಮತ್ತು ಶಿವಾನುಭವದ ಜೊತೆಗೆ ನಿರಂತರ ಕಾಯಕದಲ್ಲಿ ತೊಡಗಿಸಿಕೊಂಡವರು. "ಅನುಭಾವಿ ಅಮುಗಯ್ಯ ತನುಮನವ ಕಾಯಕಕೆ, ಅನುನಯದಿ ನೀಡಿ ಶಿವಮತವ । ಹಬ್ಬಿಸಿದ, ಗಣಸಾಸಿರೊಳಗಾದ ಶಿವಶರಣ". ಅಸಂಖ್ಯಾತ ಶಿವಗಣಂಗಳ ಲಿಂಗಶರಣಲ್ಲಿ ದೇವಯ್ಯನವರು ಒಬ್ಬರಾಗಿದ್ದರು. ಪುಷ್ಪದಲ್ಲಿ ಪರಿಮಳದಂತೆ. ಚಂದ್ರ ಚಂದ್ರಿಕೆಯಂತೆ, ಅವರು ನಿರಾಳದಲ್ಲಿ ದೇಶಾಂತರ ಕಾಲಾಂತರ ವಸ್ತು ಅಂತರವೆಂಬ ದೂರ ಬೇರೆಗಳೇನೂ ಇಲ್ಲದ ನಿಜದಾಳದಲ್ಲಿ ನಿಂದರು ಅಮುಗಿದೇವಯ್ಯನವರು.

"ಮಾಗಿ ಕಾಲಕೆ ಬಿಡದೆ ಬೇಗಿನೊಳು ಶಿವಪೂಜೆ
ಚಾಗಿ ಅಮುಗಯ್ಯ ಮಾಡುತಲಿ । ಲಿಂಗದೊಳು
ಸಾಗಿ ಬಯಲಾಗಿ ಬೆಳಗಾಗಿ"

ಅಮುಗಯ್ಯನವರು ಚಳಿಗಾಲದಲ್ಲಿ ಐಕ್ಯವಾದ ಕಾಲ. ಅಂದು ಬೆಳಗಿನಲಿ ಲಿಂಗಪೂಜೆಯ ಮಾಡಿದ ಶರಣನು ಬೆಳಗಾಗುವುದರೊಳಗೆ ಲಿಂಗದೊಳಗೆ ಬಯಲಾದ ಪರಿಯನ್ನು ಜನಪದ ಕವಿಗಳು ಕೇಳಿ ಚಾಚೂ ತಪ್ಪದೆ ಮನದುಂಬಿ ಹಾಡಿದ್ದಾರೆ.

ಶರಣರು ವಿಶ್ವವ್ಯಾಪಿಯಾಗಿ ನಿಜಸ್ವರೂಪದ ದರ್ಶನದಲ್ಲಿ ಬೆಳಗುವ ಪರಮಾದ್ಭುತದ ಪರಿವರ್ತನೆಯ ಕಾಲವಾಗಿ ಬಾಳಿದವರು. ಮಾನವನ

ಅರಿವಿನ ಬೆಳಗಿಗೆ ಅಂಟಿಕೊಂಡಿದ್ದ ಅಜ್ಞಾನದ ಅಂಧಃಕಾರವನ್ನು ಓಡಿಸಲು ಮರ್ತ್ಯಲೋಕದಲ್ಲಿ ಅವತರಿಸಿದವರು ಬಸವಣ್ಣನವರು. ಅವರೊಂದಿಗೆ ಒಡಗೂಡಿದ ಶರಣರು ನಾನು ನಾನು, ನನ್ನದು ನನ್ನದು ಎಂಬ ಮೋಹಜಾಲವನ್ನು ಕಳಚಿಕೊಂಡು ಲೋಕಕ್ಕೆ ಮಾದರಿಯಾದರು.

ಶರಣರಲ್ಲಿ ಈ ಪ್ರಪಂಚವನ್ನು ಹಿಡಿದು ಆಡುತ್ತಿರುವ ಮಾಯೆಯು ಚೆದರಿಹೋಗಿ ಆಡಂಬರವೆಲ್ಲಾ ಬಯಲಾಗಿ ಬಯಲುಗೊಂಡಿತು. "ಸಾಸಿರದ ಗಣದೊಳಗೆ ಬಾಸಿಗವು ಅಮುಗಯ್ಯ, ಕೋಶ ಮಂಟಪಕೆ ಕಲ್ಯಾಣ ಪುರದೊಳಗೆ, ಸೋಸಿ ನಡಕೊಂಡ ಶಿವಭಕ್ತ". ಕಲ್ಯಾಣದ ಶರಣರ ಜೀವನದಲ್ಲಿ ವಿಶ್ವಮಾನವ ಧರ್ಮವನ್ನು ಪ್ರತಿಷ್ಠಾಪಿಸಿ, ಮಾನವ ಮಾನವರನ್ನು ಒಂದುಗೂಡಿಸಿ ಶಿವಭಕ್ತರನ್ನಾಗಿ ಮಾಡಿದರು ಬಸವಣ್ಣನವರು. ಕುಲವೊಂದೆ ಶಿವಕುಲ, ಜಾತಿವೊಂದೆ ಶಿವಜಾತಿ ಎಂದು ಶಿವಭಕ್ತನೆ ಕುಲಜ, ಶಿವಭಕ್ತನೆ ಉಚ್ಚಜಾತಿ ಎಂದರು. ಮಾನವಕುಲ ಮಾನವ ಜಾತಿಯಲ್ಲಿ ಶಿವತತ್ತ್ವದಿಂದ ಕೂಡಿದ ಮಾನವೀಯತೆಯ ಬೀಜವನ್ನು ಬಿತ್ತಿದರು.

ಶರಣರಲ್ಲಿ ಅಷ್ಟಾವರಣಗಳು ನೆಲೆಗೊಂಡು ವೇದ-ಭೇದಗಳು ಎಲ್ಲೂ ಕಾಣಸಿಗದಂತೆ ಮಾಯಾವಾಗಿದ್ದವು. "ಐದು ಕಾಯಕ ಶರಣ ನೇದು ಹೊದಿಸಿದ ಜಗವ, ವೇದ ಭೇದಗಳು ಮಾಯಾಗಿ । ಹೊಸಮತಕೆ, ಬೋಧಿಸಲು ವಚನ ಶಾಸ್ತ್ರಾಯ್ತು". ಕಾಯಕವೆ ಶರಣರ ಉಸಿರಾಯಿತು. ಲಿಂಗ ಅಂಗದ ಸಂಗವಾಗಿ ಜೀವ ಪರಮರ ಸಂಗಮ ಸಮಾಗಮವಾಯಿತು. ಸಮರಸ ಐಕ್ಯದ ಪರಮಾರ್ಥಸಿದ್ಧಿಯಲ್ಲಿ ಅಷ್ಟಾವರಣ, ಷಟಸ್ಥಲ, ಪಂಚಾಚಾರಗಳ ಆಚರಣೆಯಿಂದ ಶರಣ ಜೀವನ ಭಕ್ತಿ ಜ್ಞಾನಗಳ ಆಗರವಾಗಿತ್ತು. ಜನಬದುಕಲಿ ಜಗಬದುಕಲೆಂದು ಸೆರಗ ಕೊಟ್ಟು ಹೋದರು. ಅವರು ನೀಡಿದ ವಚನಗಳು ನವಜೀವಿಗಳಿಗೆ ಬದಕಲು ಕಲಿಸುವ ದಾರಿದೀಪಗಳಾಗಿ ಹೊಳೆಯುತ್ತಿವೆ.

ಬಸವಾದಿ ಪ್ರಮಥರಲ್ಲಿ ಒಬ್ಬರಾದ ಅಮುಗಿದೇವಯ್ಯ ದಂಪತಿ ಕಲ್ಯಾಣದ ಅನುಭವ ಮಂಟಪದಲ್ಲಿ ಗಣ್ಯಮಾನ್ಯರಾಗಿ ಶರಣತತ್ತವನ್ನು ಪಾಲಿಸುತ್ತಾ ಬಾಳಿ ಬೆಳಗಿದವರು.

ಲಿಂಗವೇಧಕ ಶರಣ ಲಿಂಗೈಕ್ಯ ಅಮುಗಯ್ಯ
ಲಿಂಗೈಕ್ಯದೇಹಿ ಹೂಳಜೆಯ । ಸೋಮನಿಗೆ
ಗುಂಗಿ ಪೂಜಿಸುವ ಹೂವಡಿಗೆ

"ಮೇದಿನಿಯೊಳು ಗುರು ಲಿಂಗ ಜಂಗಮದ ಭಕ್ತಿಯ ಬೆಳಸೆಂದು ಎಲೆ ಶಿವನೆ, ನೀವು ಕೊಟ್ಟು ಕಳಿಸಿದ ನಿರೂಪ" ಎಂದು ಕಳಿಸಿದರೆ ಬಸವಣ್ಣನವರು ಮಹಾಪ್ರಸಾದವೆಂದು ಕೈಕೊಂಡರು. ಆ ನಿರೂಪದಲ್ಲಿ ಅಸಂಖ್ಯಾತ ಮಹಾಗಣಂಗಳ ಕೂಡಿಸಿ ಮಹಾಮನೆ ಕಟ್ಟಿದರು. ಲಿಂಗಜ್ಞಾನಿಯಾಗಿದ್ದ ಅಮುಗಿದೇವಯ್ಯನವರು ಸಹ ಅವರೊಡನೆ ಬಾಳಿದವರಲ್ಲಿ ಒಬ್ಬರಾಗಿದ್ದರು. ಕೊನೆಯಲ್ಲಿ ಲಿಂಗವೇಧಕನಾದ ಶರಣ ಅಮುಗಯ್ಯ 'ಸಿದ್ಧಸೋಮನಾಥಲಿಂಗ' ದಲ್ಲಿ ಬೆರೆಯಲು ಹೂಳಜೆಯಲ್ಲಿ ಕುಳಿತು ತನ್ನ ಇಷ್ಟದೇವನ ಸನ್ನಿಧಿಯಲ್ಲಿ ಇಷ್ಟಲಿಂಗ ಪೂಜಿಸುತ್ತಾ ಲಿಂಗದೊಂದಾಗಿ ಬೆರೆತು ಲಿಂಗದೇಹಿಯಾದರು.

ಅಮುಗಿದೇವಯ್ಯ ಕಲ್ಯಾಣಕ್ಕೆ ಬರುವ ಮುನ್ನ ಸೊನ್ನಲಿಗೆಯಲ್ಲಿ ಇಷ್ಟಲಿಂಗ ನಿಷ್ಠೆ ಮತ್ತು ನೆಯ್ಗೆಯ ಕಾಯಕದಲ್ಲಿ ಜೀವನ ಸಾಗಿಸಿದರು. ಅನಂತರ ಕಲ್ಯಾಣದ ಶರಣರೊಡನೆ ಅನುಭಾವದ ಅಂತರಂಗದ ಜೀವನ ನಡೆಸುತ್ತಾ ನವೋಲ್ಲಾಸದಿಂದ ಬದುಕಿದರು. ಕೊನೆಯಲ್ಲಿ ಪುಳಜೆಯ ಸಿದ್ಧಸೋಮನಾಥನ ಸನ್ನಿಧಿಯಲ್ಲಿ ಶರಣತತ್ತ್ವ ಪ್ರಚಾರ ಮಾಡುತ್ತ ಸಾರ್ಥಕದ ಜೀವನ ನಡೆಸಿ ಪೂರ್ಣಗೊಳಿಸಿದರು.

ಅಮುಗಿದೇವಯ್ಯನವರ ಜೀವನ ಚರಿತ್ರೆಯನ್ನು ಜನಪದ ಕವಿಗಳು ಅತ್ಯಂತ ಸೊಗಸಾಗಿ ಹಾಡಿದ್ದಾರೆ. ಹಂತಿಯು ಹಾಡುಗಳೆಂದು ಕಡೆಗಣಿಸಬೇಡಿ. ನಮ್ಮೊಳಗೆ ಅಮುಗಯ್ಯನವರು ಕುಳಿತು ಹಾಡಿಸಿದ್ದಾರೆ. ಎಂದು ಜನಪದರು ತಮ್ಮ ಅಗಾಧವಾದ ಭಕ್ತಿಯ ಆಳವನ್ನು ವ್ಯಕ್ತಪಡಿಸಿದ್ದಾರೆ.

ಹಂತಿಯ ಹಾಡೆಂದು ಪಂತಕಟ್ಟಲು ಬೇಡ
ಕಂತಿ ಕರಗುವದು ನಿಂತಲ್ಲೆ । ಅಮುಗಯ್ಯ
ಕುಂತು ಎದೆಯೊಳಗೆ ಹಾಡಿಸಿದ

ಜನಪದರು ನೇಗಿಯ ಅಮುಗಯ್ಯ ಎಂದು ನೂರಾರು ನುಡಿಗಳಿಂದ ಹಾಡುತ್ತಾ ಬಂದಿದ್ದಾರೆ. ಕನ್ನಡ ಕೃತಿಗಳಲ್ಲಿ ಅಮುಗಿದೇವಯ್ಯನವರ ಜೀವನದ ಬಗ್ಗೆ ಸಮಗ್ರವಾಗಿ ಕಂಡು ಬರುವುದಿಲ್ಲ. ಸ್ಥಾವರಲಿಂಗ ಪೂಜಕರಾದ ಸಿದ್ಧರಾಮೇಶ್ವರರನ್ನು ಎಚ್ಚರಗೊಳಿಸಿ ಅಂತರ್ಮುಖಿಯಾಗಿ ಮಾಡಿದರು. ಶಿವನ ಕೈಯಲ್ಲಿ ಹೊರೆಯನ್ನು ಹೊರೆಸಿಕೊಂಡು ಬಂದಿರುವ ಮತ್ತು ಲಿಂಗಮುಖದಿಂದ ಹೊರಡಿದ ಶಬ್ದದಿಂದ ಸಿದ್ಧರಾಮೇಶ್ವರರು ಬದಲಾವಣೆಯಾದುದು ಎಂಬ ಸಾಂಕೇತಿಕ ನಿರೂಪಣೆಯೆ ಪ್ರಧಾನವಾಗಿದೆ.

ಶರಣರಾದ ಅಮುಗಿದೇವಯ್ಯ ಮತ್ತು ಅಮುಗಿರಾಯಮ್ಮ ದಂಪತಿ ಕಲ್ಯಾಣದ ಕ್ರಾಂತಿಯ ನಂತರ ಪುಳಜೆಗೆ ಹೋಗಿ ಅಲ್ಲಿಯೇ ವಾಸಮಾಡಿದರು. ಅಲ್ಲಿಯ ಸೋಮನಾಥ ದೇವಾಲಯಕ್ಕೆ ಲಿಂಗೇಶ್ವರ ಮಂದಿರ ಎನ್ನುತ್ತಾರೆ. ಆ ಊರಿನವರೆಲ್ಲ ಸೋಮನಾಥಲಿಂಗದ ಬಗ್ಗೆ ಕೇಳಿದರೆ ಸೋಮನಾಥ ದೇವಾಲಯದ ಗರ್ಭಗುಡಿಯ ಹಿಂದೆ ಇರುವ ಒಂದು ಸಮಾಧಿ ಗುಡಿಯನ್ನು ತೋರಿಸುತ್ತಾರೆ. ಈ ಗುಡಿಯಲ್ಲಿ ಎರಡು ಪ್ರತ್ಯೇಕವಾದ ಸಮಾಧಿಗಳು ಕಾಣಬಹುದು. ಈ ಸಮಾಧಿಗಳು ಅಮುಗಿದೇವಯ್ಯ ಮತ್ತು ಅಮುಗಿರಾಯಮ್ಮನವರದೇ ಇರಬಹುದು ಎಂದು ಹೇಳಲಾಗುತ್ತಿದೆ.

ಅಮುಗಿದೇವಯ್ಯನವರು ಕಲ್ಯಾಣದಿಂದ ಹೊರಟು ಪುಳಜೆಗೆ ಹೋಗಿ ತನ್ನ ಆರಾಧ್ಯದೇವರ ಸನ್ನಿಧಿಯಲ್ಲಿಯೇ ಕಾಯಕ, ದಾಸೋಹದ ಜೊತೆಗೆ ಶಿವಾನುಭವ ನೀಡುವುದರ ಮೂಲಕ ಕಾಲಕಳೆಯಿತ್ತಿದ್ದರು.

ಇಷ್ಟಲಿಂಗದ ಮೇಲೆ ಇಟ್ಟ ಭಕ್ತಿಯ ಮಿಗಿಲು
ಕಟ್ಟಾಲಿಂಗಿಗಳ ಮನೆದೇವ । ಹೂಳಜೆಯ
ಶಿಷ್ಟ ಸೋಮೇಶ ದಯಮಾಡಿ

ಅಮುಗಿದೇವಯ್ಯನವರು ನಿಷ್ಠೆಯಿಂದ ಇಷ್ಟಲಿಂಗ ಪೂಜೆ ಮಾಡುತ್ತಿದ್ದರು. ತನ್ನ ಕೊನೆಯ ದಿನಗಳಲ್ಲಿ ಆರಾಧ್ಯದೇವ ಸಿದ್ಧಸೋಮನಾಥನ ಸನ್ನಿಧಿಯಲ್ಲಿ ಏಕಾಗ್ರನಾಗಿ ಧ್ಯಾನಿಸುತ್ತಾ ಐಕ್ಯರಾಗಿರುವ ಊಹೆಗಳ ಆಧಾರದಿಂದ ಅವರ ಸಮಾಧಿಯು ಹೂಳಜೆಯಲ್ಲಿಯೇ ಇದೆ ಎಂಬ ಪ್ರತೀತಿಯಿದೆ.

■■

ಶಾಸನದಲ್ಲಿ ಅಮುಗಿದೇವಯ್ಯ

ಕಲ್ಯಾಣದಲ್ಲಿ ಮಹತ್ತರವಾದ ಕಾಯಕ ನಡೆಯುತ್ತಿರುವಾಗ ಕೊಂಡಿಗಳ ಕುತಂತ್ರದಿಂದ ನಡೆದ ಗಲಭೆಯಿಂದ ಅಶಾಂತಿ ಉಂಟಾಯಿತು. ಹರಳಯ್ಯ ಮಧುವಯ್ಯನವರಿಗೆ ಎಳೆಹೂಟೆ ಶಿಕ್ಷೆ ಕೊಟ್ಟು ಕ್ರೂರತನದಿಂದ ವಧಿಸಿದರು. ಕೆಟ್ಟಿತ್ತು ಕಲ್ಯಾಣ ಹಾಳಾಯಿತ್ತು ನೋಡಾ ಎಂಬಂತೆ ಕಲ್ಯಾಣಪಟ್ಟಣ ಚಲ್ಲಾಪಿಲ್ಲಿಯಾಯಿತು.

ವಿಚಾರವಾದಿ ಅಮುಗಿದೇವ ಅಲ್ಲಿಂದ ಹೊರಟು ಬಂದು ಪುಳಜೆಯಲ್ಲಿ ದೀರ್ಘಕಾಲದವರೆಗೆ ಜನಜಾಗೃತಿಯನ್ನುಂಟು ಮಾಡುತ್ತಾ ಜೀವಿಸಿದ್ದ ಅವಧಿಯಲ್ಲಿ ಅನೇಕ ರಾಜಕೀಯ ಬದಲಾವಣೆಗಳಾದವು. ಕಲಚೂರ್ಯ ಬಿಜ್ಜಳನ ನಂತರ ಅವನ ಮಕ್ಕಳು ಅಲ್ಪಕಾಲದವರೆಗೆ ರಾಜರಾಗಿದ್ದರು. ಅನಂತರದಲ್ಲಿ ಮತ್ತೆ ಕಲ್ಯಾಣ ಚಾಲುಕ್ಯರ ರಾಜ್ಯ ಸ್ಥಾಪಿತವಾಯಿತು. ಆದರೆ ಅದು ಆರು ವರ್ಷ ಕಾಲದಲ್ಲೇ ಅಳಿದುಹೋಯಿತು. ಆ ಸಂದರ್ಭದಲ್ಲೇ ದೇವಗಿರಿ ಯಾದವರು ಪ್ರಬಲರಾಗುತ್ತಿದ್ದರು. ಮುಂದೆ ೧೧೮೭ ರಿಂದ ೧೧೯೧ ರ ವರೆಗೆ ರಾಜ್ಯವಾಳಿದಂಥ ದೇವಗಿರಿಯ ಯಾದವರಾಜನಾದ ಭಿಲ್ಲಮನು ಕರ್ನಾಟಕದ ವಿಜಾಪುರ ಪ್ರಾಂತ್ಯವನ್ನು ಆಕ್ರಮಿಸಿಕೊಂಡಿದ್ದನು. ಅವನ ನಂತರ ಅವನ ಮಗನಾದ ಜೈತುಗಿಯು ೧೧೯೧ ರಿಂದ ೧೨೧೦ ರ ವರೆಗೆ ರಾಜ್ಯವಾಳಿದನು. ಅವನ ಕಾಲದಲ್ಲಿ ಅವನ ಮಗನಾದ ಸಿಂಘಣನು ಅತ್ಯಂತ ಶೂರನೂ, ಸಮರ್ಥನೂ ಆಗಿದ್ದನು.

ಪುಳಜೆಯಲ್ಲಿ ಅಮುಗಿದೇವಯ್ಯನವರು ಸುಮಾರು ೩೦-೩೫ ವರ್ಷಗಳ ಕಾಲ – ಬದುಕಿರಬಹುದು. ಈ ದೀರ್ಘ ಅವಧಿಯಲ್ಲಿ ಧರ್ಮದ ನಂದಾದೀವಿಗೆಯನ್ನು ಬೆಳಗಿಸಲು ಪ್ರಯತ್ನಿಸಿದ್ದರು. ತಮ್ಮ ಉಜ್ವಲವಾದ ವ್ಯಕ್ತಿತ್ವದ ಪ್ರಭಾವದಿಂದ ಸುತ್ತಮುತ್ತಲಿನ ಜನರ ಜೀವನದ ಮೇಲೆ ಪರಿಣಾಮವಾಗುವಂತೆ ಶಿವತತ್ತ್ವವನ್ನು ಬೀರಿದುದು ಕಂಡು ಬರುತ್ತದೆ. ಪುಳಜೆಯಲ್ಲಿ ಮಾತ್ರವಲ್ಲದೆ ವಿಜಾಪುರದ ಸುತ್ತಮುತ್ತಲಿನ ಭಾಗಗಳಲ್ಲಿ ಮತ್ತು ಜತ್ತ, ಮುಧೋಳ ಸಂಸ್ಥಾನಗಳಲ್ಲಿ ಕೂಡ ಅಮುಗಿದೇವಯ್ಯನವರ

ಉಲ್ಲೇಖವಿರುವ ಅನೇಕ ದೇವಾಲಯಗಳಿರುವುದು ತಿಳಿದು ಬರುತ್ತದೆ. ಅಮುಗಯ್ಯನವರಿಗೆ 'ಅಮಾಕಸಿದ್ಧ' ಎಂಬ ಹೆಸರು ಪ್ರಚಲಿತವಾಗಿರುವುದೂ ಮತ್ತು ಪುಳಜೆಯ ಶಾಸನದಲ್ಲಿ ಇವರಿಗೆ ಕೊಟ್ಟ ಸಿದ್ಧಕುಲಾರ್ಣವ ಪ್ರವರ್ಧನ ಸುಧಾಕರ" ಎಂಬ ವಿಶೇಷಣವೂ ಕುತೂಹಲಕರವಾದ ಅಂಶಗಳಾಗಿವೆ. ಕುರುಬ ಮತ್ತು ಹಾಲುಮತದವರ ಮೇಲೆ ವಿಶೇಷ ಪ್ರಭಾವವನ್ನು ಬೀರಿ ಅವರನ್ನು ಲಿಂಗವಂತರನ್ನಾಗಿ ಮಾಡಿದ ಸಿದ್ಧ ಅಮುಗಿದೇವಯ್ಯನವರ ವ್ಯಕ್ತಿತ್ವ ಬಹುಮುಖವೂ ಬಹು ವ್ಯಾಪಕವೂ ಆಗಿದ್ದಿತ್ತೆಂದು ಕಂಡುಕೊಳ್ಳಬಹುದು.

ಸಿಂಘಣನು ಇಡೀ ಕರ್ನಾಟಕ ಪ್ರಾಂತ್ಯವನ್ನು ತನ್ನ ಕೈವಶ ಮಾಡಿಕೊಂಡನು. ಅವನು ವಿಜಾಪುರಕ್ಕೆ ೧೧೯೯ರಲ್ಲಿ ಬರುತ್ತಾನೆ. ಅಮುಗಿದೇವಯ್ಯನವರು ಹತ್ತಿರದ ಪುಳಸಿ ಗ್ರಾಮದಲ್ಲಿ ವಾಸವಾಗಿದ್ದರು. ದೇವಯ್ಯನವರ ಪ್ರಖ್ಯಾತಿಯನ್ನು ಕೇಳಿದ ಸಿಂಘಣನು ಅವರನ್ನು ಕಾಣಬೇಕೆಂದು ತನ್ನ ದಂಡಾಧಿಕಾರಿಗಳೊಂದಿಗೆ ಬಂದನು. ಅಮುಗಯ್ಯನವರನ್ನು ಕಂಡು ಪ್ರಭಾವಿತನಾದ ಸಿಂಘಣನು ಪ್ರೀತನಾಗಿ ಸಿದ್ಧಾರ್ಥಿಸಂವತ್ಸರದ ಮಾಘ ಶು ॥ ೧೧ನೇ ದಿವಸ ದೇವಾರ್ಚನೆಯ ಸಮಯದಲ್ಲಿ ಶ್ರೀಸ್ವಯಂಭು ಸಿದ್ಧಸೋಮನಾಥದೇವರ್ಗೆಂದಾಯಿಥ್ಯವನು ಸರ್ವನಮುಶ್ಯವಾಗಿ ಅಮುಗಿದೇವರಸರ್ಗೆ ಅಕರ ಪರಿಹಾರವಾಗಿ ಧಾರಪೂರ್ವಕಂ ಮಾಡಿಕೊಟ್ಟರು ಎಂದು ಅಲ್ಲಿಯ ಶಿಲಾಶಾಸನದಲ್ಲಿ ಹೇಳಿದೆ. ಹೀಗೆ ಅಮುಗಿದೇವಯ್ಯರಿಗೆ ಅರಸನಾದ ಸಿಂಘಣನು 'ಇಥ್ಥೆ' ಗ್ರಾಮವನ್ನು ಉಂಬಳಿ ಹಾಕಿಕೊಟ್ಟನು. ಅಲ್ಲದೆ ಅವನು ದೇವಾಲಯಕ್ಕೂ ಬಹಳ ಭೂದಾನವನ್ನು ನೀಡಿದನು. ಹಾಗೆಯೇ ಸಿಂಘಣನ ಕೈಕೆಳಗಿನ ಅಧಿಕಾರಿಗಳಾದ ಸಾಹಣಿಕುಮಾರ, ಸೋಯಿದೇವ, ಗಂಗಿದೇವ, ಸಂಕಮದೇವ, ಬಿಜ್ಜನಾಣ, ರವಿಯದೇವ, ಜೋಯಿದೇವ ಇವರೂ ಕೂಡ ದೇವಾಲಯಕ್ಕೆ ದಾನಕೊಟ್ಟರು. ಇದು ಅಲ್ಲಿದ್ದ ಶಿಲಾಶಾಸನದಿಂದಲೇ ತಿಳಿದುಬರುತ್ತದೆ. ಈ ಶಾಸನದ ವರ್ಷ ಕ್ರಿ. ಶ. ೧೧೯೯ ರದು ಇರುತ್ತದೆ. ಎಂದು ಡಾ. ಫ.ಗು. ಹಳಕಟ್ಟಿಯವರ ಸಮಗ್ರ ಸಾಹಿತ್ಯದಲ್ಲಿ ಪ್ರಕಟಿಸಿರುವುದನ್ನು ಕಾಣಬಹುದಾಗಿದೆ.

ಅಮುಗಿದೇವಯ್ಯರಿಗೆ ಕೊಟ್ಟ ಇಥ್ಥೆ ಗ್ರಾಮವು ಪುಳಜಿ ಗ್ರಾಮದ ಪಶ್ಚಿಮಕ್ಕೆ ೨ ಮೈಲುಗಳ ಮೇಲೆ ಈಗಿನ ಇಟೆ ಎಂಬ ಹೆಸರಿನ ಗ್ರಾಮವಾಗಿದೆ. ಪುಳಜ ಎಂಬ ಹೆಸರಿದ್ದ ಗ್ರಾಮವು ಶಿಲಾಶಾಸನದ ಸಂಸ್ಕೃತ ಭಾಗದಲ್ಲಿ 'ಪೂರ್ಣಜಾ' ಎಂತಲೂ ಕನ್ನಡ ಭಾಗದಲ್ಲಿ 'ಹೂಳಜೆ' ಎಂದಾಗಿ ಕರೆಯಲ್ಪಟ್ಟಿದೆ.

ಶಾಸನದಲ್ಲಿ ಅಮುಗಿದೇವಯ್ಯರನ್ನು 'ಶಿವಾಚಾರ್ಯೆರನಿರತ, ಲಿಂಗೈಕ್ಯ,ಲಿಂಗವೇಧಕ' – ಎಂತಲೂ 'ಮಹೇಶ್ವರಗಣ ಕುಲಾನ್ವಯದಿವಾಕರ' ಎಂತಲೂ 'ಭಕ್ತಜನ ಚಿಂತಾಮಣಿ' 'ಶ್ರೀ ಸಿದ್ಧಸೋಮನಾಥದೇವ ಶ್ರೀ ಪಾದಪಂಕಜ ಭ್ರಮರ ಲಿಂಗದೇಹಿ' 'ಶರಣ ಸಂತಾನ' ಎಂಬ ಮೊದಲಾದ ರೀತಿಯಲ್ಲಿ ಪ್ರಸ್ತಾಪಿಸಿಲಾಗಿದೆ. ಶಿಲಾಶಾಸನದಲ್ಲಿ ಅಮುಗಿದೇವಯ್ಯ ಸಿಂಘಣನ ದೊರೆಯಿಂದ ವಿವಿಧ ಪ್ರಕಾರಗಳಿಂದ ಹೊಗಳಿಕೆಗೆ ಪಾತ್ರರಾದವರೆಂದು ಬರುತ್ತದೆ.

ಈ ಶಾಸನಗಳ ಪ್ರಕಾರ ಅಮುಗಿದೇವಯ್ಯನವರು ಕೇವಲ ಕಾಲ್ಪನಿಕ ವ್ಯಕ್ತಿಯಲ್ಲ. ಅವರು ಬಸವಾದಿ ಶರಣರ ಕಾಲದಲ್ಲಿ ಇದ್ದು ವಚನಕಾರರಾಗಿ ಖ್ಯಾತಿ ಪಡೆದ ಶರಣ ಎಂದು ತಿಳಿದುಬರುತ್ತದೆ.

ಇನ್ನೂ ಕೆಲವು ವಿಶೇಷಣಗಳು ಮೇಲೆ ಹೇಳಿದ ಶಾಸನದಲ್ಲಿ ಅಮುಗಿದೇವಯ್ಯಗೆ ಕೊಟ್ಟಿರುವದನ್ನು ನೋಡಬಹುದು. "ಮನಿವತ್ ಪೂಜಿತೋ ಯತಿಃ" "ದೂರಶ್ರವಣ", "ದೂರದಂಶನ ಜ್ಞಾನಸಂಪನ್ನ ಅಣಿಮಾದ್ಯಷ್ಟಗುಣ ಪರಿಪೂರ್ಣ" ಈ ಮೊದಲಾದ ಕೆಲವು ಮಾತುಗಳು ಅಮುಗಿದೇವಯ್ಯನವರ ಘನವ್ಯಕ್ತಿತ್ವದ ಮುಖಗಳನ್ನು ಕಂಡುಕೊಳ್ಳಲು ಸಹಾಯಕವಾಗಿವೆ.

ಅಮುಗಿದೇವಯ್ಯನವರು ಸೋಮನಾಥಲಿಂಗದ ದೇವಾಲಯದಲ್ಲಿನ ಆಚಾರ್ಯರಾಗಿ ಇದ್ದಿರುವಂತೆ ಈ ಮಂದಿರದಲ್ಲಿ ಇರುವ ಕನ್ನಡದ ಶಾಸನ ಹೇಳುತ್ತದೆ. ಆದರೆ ಅಮುಗದೇವಯ್ಯ ಮತ್ತು ಅಮುಗಿರಾಯಮ್ಮ ದಂಪತಿಗಳ ಪರಿಚಯ ಈ ದೇವಾಲಯದ ಸುತ್ತಲಿರುವ ಜನಗಳಿಗೆ ಏನೂ ಸಹ

ಗೊತ್ತಿಲ್ಲದೇ ಇರುವುದು ಅತ್ಯಂತ ವಿಷಾದನೀಯ ಸಂಗತಿಯಾಗಿದೆ. ಇಲ್ಲಿಯ ಪೂಜಾರಿಗಳು ಲಿಂಗಾಯತರಾಗಿದ್ದಾರೆ. ಆದರೆ ಅಚ್ಚಗನ್ನಡದ ನೆಲವು ಈಗ ಅಚ್ಚ ಮರಾಠಿಮಯವಾಗಿದೆ. ಈ ಗುಡಿಯಲ್ಲಿರುವ ಪೂಜಾರಿಗಳಿಗೆ ಕನ್ನಡ ಬರುವುದಿಲ್ಲ. ಆದರೆ ಇಲ್ಲಿರುವ ಕನ್ನಡದ ಶಾಸನವನ್ನು ತುಂಬಾ ಉಲ್ಲಾಸದಿಂದ ತೋರಿಸುತ್ತಾರೆ. ಆ ಶಾಸನವನ್ನು ಕಾಪಾಡಿಕೊಂಡು ಬಂದಿರುವುದೆ ಒಂದು ಸಂತೋಷದ ವಿಷಯವಾಗಿದೆ.

ಈಗ ಪಂಡರಪೂರ ತಾಲೂಕಿನಲ್ಲಿ ಬರುವ ಹೂಳಜೆಯಲ್ಲಿ ಸೋಮನಾಥ ದೇವಾಲಯವು ತುಂಬಾ ವಿಸ್ತಾರವಾಗಿದೆ. ಸುಂದರವಾಗಿರುವ ಮಂದಿರ ಭವ್ಯವಾಗಿದೆ. ಐದು ಭಾಗಗಳುಳ್ಳ ಅತ್ಯಂತ ದೊಡ್ಡದಾದ ಈ ಮಂದಿರದಲ್ಲಿ ಗರ್ಭಗೃಹ, ಅಂತರಾಳ, ನವರಂಗ ಮಂಟಪ, ತೆರೆದ ಮಂಟಪಗಳಿವೆ.

ಹೂಳಜೆಯ ಸಿದ್ಧಸೋಮಲಿಂಗನ ರಥೋತ್ಸವವು 'ಶುದ್ಧೇಕದಶ ಮಾಘದಲ್ಲಿ ಪ್ರತಿವರ್ಷ ಜರಗುವುದು. ಕಾರ್ತಿಕ ಹುಣ್ಣಿಮೆಯ ದಿನಗಳಲ್ಲಿ ಒಂಬತ್ತು ದಿನಗಳವರೆಗೆ ನಿರಂತರ ಜಾತ್ರೆ ನಡೆಯುತ್ತದೆ. ಭಕ್ತರು ಒಂಭತ್ತು ದಿನವೂ ಲಿಂಗಕ್ಕೆ ಹಾರ ಹಾಕುವ ಮತ್ತು ಏಳುದಿನ ಉಪವಾಸ ಮಾಡುವ ಸಂಪ್ರದಾಯವನ್ನಾಗಿ ಮಾಡಿಕೊಂಡಿದ್ದಾರೆ. ಎಂದು "ಶರಣರ ಸ್ಮಾರಕಗಳು" ಎಂಬ ಕೃತಿಯಲ್ಲಿ ಕ್ಷೇತ್ರ ದರ್ಶನ ಮಾಡಿದ ನುಡಿಗಳಾಗಿವೆ.

ಜನರು ಆಚರಿಸಿಕೊಂಡು ಬರುವ ಈ ಜಾತ್ರೆಯಲ್ಲಿ ತೇರು ಎಳೆಯುವುದಿಲ್ಲ. ವಿಶೇಷವಾಗಿ ದೇವರ ಪೂಜೆ ಮಾಡುತ್ತಾ, ಪಲ್ಲಕ್ಕಿ ಉತ್ಸವ ಎಂದು ನಡೆಸುತ್ತಾರೆ. ಸಂಪ್ರದಾಯದಂತೆ ಜಾತ್ರೆಯ ಎರಡನೆಯ ದಿನದಂದು ಪಲ್ಲಕ್ಕಿಯಲ್ಲಿ ಸಿದ್ಧಸೋಮನಾಥಲಿಂಗದ (ಲಿಂಗೇಶ್ವರ ಮೂರ್ತಿಯನ್ನು ಇಟ್ಟು ಉತ್ಸವ ನೇರವೇರಿಸುತ್ತಾರೆ. ಏಳನೆಯ ದಿನದಂದು ಘಟಸ್ಥಾಪನೆ ನಡೆಯುತ್ತದೆ. ಹತ್ತನೆಯ ದಿನಕ್ಕೆ ಮೊಸರಿನ ಗಡಿಗೆ ಒಡಿಯುವ ಆಚರಣೆಯಾಗಿ ಜರಗುತ್ತದೆ. ಗಡಿಗೆ ಒಡೆದ ಮೇಲೆ ಹೊರಚೆಲ್ಲುವ ಮೊಸರನ್ನು ಪ್ರಸಾದವೆಂದು ವಿತರಿಸುವ ಸಂಪ್ರದಾಯವೂ ಇಲ್ಲಿ ನಡೆಯುತ್ತದೆ

ಎಂದು ಇಲ್ಲಿಯ ಭಕ್ತರು ಹೇಳುತ್ತಾರೆ. ಇಂದಿಗೂ ಇದೊಂದು ಜಾಗೃತ ಕ್ಷೇತ್ರವಾಗಿ ಜನಮಾನಸದಲ್ಲಿ ಉಳಿದುಕೊಂಡಿದೆ.

ಅಮುಗಿದೇವಯ್ಯನವರು ನಿಷ್ಠೆಯಿಂದ ಇಷ್ಟಲಿಂಗ ಪೂಜಕರಾಗಿ, ಶರಣರಲ್ಲಿ ಗಣ್ಯಮಾನ್ಯರಾಗಿ, ವಿಚಾರವಾದಿ ವಚನಕಾರರಾಗಿ ಜನರ ಮನದಲ್ಲಿ ಮಾತ್ರವಲ್ಲದೆ ಕನ್ನಡದ ಅನುಭಾವ ಸಾಹಿತ್ಯದಲ್ಲಿಯೂ ಅಮರವಾಗಿ ನೆಲೆಸಿದ್ದಾರೆ.

■■

ಗ್ರಂಥ ಋಣ

೧. ಸಂಕೀರ್ಣ ವಚನಸಂಪುಟ	ಸಂ. ಡಾ. ಎಂ.ಎಂ. ಕಲಬುರ್ಗಿ
೨. ಕನ್ನಡ ಜಾನಪದ ಗೀತೆಗಳು	ಡಾ. ಬಿ. ಎಸ್. ಗದ್ದಗಿಮಠ
೩. ಫ.ಗು. ಹಳಕಟ್ಟಿ ಸಮಗ್ರ ಸಾಹಿತ್ಯ	ಸಂ. ಡಾ. ಗುಂಡಣ್ಣ ಕಲಬುರ್ಗಿ
೪. ಶೂನ್ಯ ಸಂಪಾದನೆಯ ಪರಾಮರ್ಶೆ	ಪ್ರೊ. ಸಂ. ಶಿ. ಭೂಸನೂರಮಠ
೫. ಬಸವೇಶ್ವರರ ಸಮಕಾಲೀನರು	ಬಸವ ಸಮಿತಿ ಬೆಂಗಳೂರು
೬. ಬಸವೇಶ್ವರರ ವಚನ ದೀಪಿಕೆ	ಡಾ. ಎಚ್. ತಿಪ್ಪೇರುದ್ರಸ್ವಾಮಿ
೭. ಶರಣ ಚರಿತಾಮೃತ	ಡಾ. ಸಿದ್ದಯ್ಯ ಪುರಾಣಿಕ
೮. ವಚನ ಬೆಳಕು	ರಂಜಾನ್ ದರ್ಗಾ
೯. ವಚನ ಚಿಂತನ ಮಾಲೆ	
ಅಮುಗೆ ರಾಯಮ್ಮ-ದೇವಯ್ಯ	ಬಾ. ಹ. ರಮಾಕುಮಾರಿ


ಪ್ರಸಾರಾಂಗ ಲಿಂಗಾಯತ ವಿಶ್ವವಿದ್ಯಾಲಯ

ಅನುಭವ ಮಂಟಪ, ಬಸವಕಲ್ಯಾಣ, ಜಿಲ್ಲೆ : ಬೀದರ

ಪ್ರಕಟಣೆಯಾದ ಪುಸ್ತಕಗಳು

ಇಷ್ಟಲಿಂಗನಿಷ್ಠ
ಅಮುಗಿದೇವಯ್ಯ







ಅಂಗ ಲಿಂಗ ಒಂದೆಂದ ಬಳಿಕ ಅಂಗ ಕೆಟ್ಟು ಲಿಂಗ ಉಳಿಯಿತ್ತು ನೋಡಾ
ಅಂಗ ನಿರ್ವಯಲಾದಲ್ಲಿ ಲಿಂಗ ಭವಿಯಾದುದು ನೋಡಾ
ಅಂಗ ಲಿಂಗ ನಿರ್ವಯಲಲ್ಲಡಗಿಸಬಲ್ಲಡೆ, ಭಕ್ತನೆಂಬೆ ಮಹೇಶನೆಂಬೆ
ಕಪಿಲಸಿದ್ಧಮಲ್ಲಿಕಾರ್ಜುನನವನೆ ಎಂಬೆ ನೋಡಾ, ಅಮುಗಿದೇವಾ

–ಸಿದ್ಧರಾಮೇಶ್ವರರ

ಪ್ರಕಾಶಕರು
ಪ್ರಸಾರಾಂಗ ಲಿಂಗಾಯತ ವಿಶ್ವವಿದ್ಯಾಲಯ
ಅನುಭವಮಂಟಪ ಬಸವಕಲ್ಯಾಣ, ಜಿಲ್ಲೆ. ಬೀದರ